1945

ಶಿವಾನುಭವ ಗ್ರಂಥಮಾಲಾ ನಂ|| ೭೮

# ಮೆರೆಮಿಂಡದೇವನ

## (ವಚನಗಳು.)

College of Commerce
Library, Bijapur.

★

820 HAL
ASPC Library
G3143
ASPC Library

ಫ. ಗು. ಹಳಕಟ್ಟಿ.

೨೮೦=೬

ASPC Library
820 HAL
G3143
ASPC Library
2017
... of Commerce
...arg, Bijapur.
ಗ್ರಂಥಾಲಯ
ವಿಜಯಪುರ
586103.

# ಪ್ರಸ್ತಾವನೆ.

—:*:—

ಮೆರೆಮಿಂಡದೇವನು ಚೋಳಮಂಡಲದಲ್ಲಿರುವ ತಿರುವಾರೂರು ಎಂಬ ಗ್ರಾಮದವನು. ಅವನು ವಚನಕಾರನಿದ್ದಾನೆ. ಅವನ ೧೦೧ ವಚನಗಳನ್ನು ನಾವು ಸಂಗ್ರಹಿಸಿ ಈಗ ಪ್ರಕಟಮಾಡಿರುತ್ತೇವೆ. ಇವನು ತಮಿಳು ನಾಡಿನವನು. ಆದರೂ ಕನ್ನಡ ಭಾಷೆಯಲ್ಲಿ ಶಿವಾನುಭವದ ತತ್ವಗಳನ್ನು ನಿರೂಪಿಸಿದ್ದಾನೆ. ಅವನು ತನ್ನ ವಚನಗಳಲ್ಲಿ ಕ್ರಿಯಾಜ್ಞಾನದ ಭೇದವನ್ನೂ ಇಷ್ಟಲಿಂಗ, ಪ್ರಾಣಲಿಂಗ, ಭಾವಲಿಂಗಗಳ ಸ್ವರೂಪನ್ನೂ, ಗುರುಲಿಂಗಜಂಗಮದ ರೀತಿಯನ್ನೂ ಬಹು ಆಳವಾಗಿ ವಿವೇಚಿಸಿದ್ದಾನೆ. ಇದರಿಂದ ತಮಿಳು ದೇಶದಲ್ಲಿ ಸಹ ವೀರಶೈವ ಧರ್ಮದ ತತ್ವಗಳ ಪ್ರಚಾರವು ಉಂಟಾಗಿತ್ತೆಂದು ಕಂಡುಬರುತ್ತದೆ. ಹೇಗೆ ಆಂಧ್ರ ದೇಶದಲ್ಲಿಯೂ ಕೇರಳ ದೇಶದಲ್ಲಿಯೂ ವೀರಶೈವ ಶಿವಶರಣರು ಆಗಿ ಹೋಗಿರುವರೋ ಹಾಗೆಯೇ ತಮಿಳು ದೇಶದಲ್ಲಿಯೂ ಕೂಡ ಅವರು ಉತ್ಪನ್ನವಾಗಿರುತ್ತಾರೆ.

ಮೆರೆಮಿಂಡದೇವನು ತನ್ನ ವಚನಗಳನ್ನು 'ಐಘಟದೂರ ರಾಮೇಶ್ವರ ಲಿಂಗ' ಎಂಬ ಮುದ್ರಿಕೆಯನ್ನಿಟ್ಟುಕೊಂಡು ರಚಿಸಿದ್ದಾನೆ. ಅಂದರೆ ಅಂಗ ಅಥವಾ ಲೌಕಿಕ ವ್ಯವಹಾರದಿಂದ ದೂರನಾದ ಪರಮಾತ್ಮನೇ, ಎಂದು ಸಂಬೋಧಿಸುತ್ತ ತನ್ನ ವಿಚಾರಗಳನ್ನು ಪ್ರಕಟಿಸಿದ್ದಾನೆ. 'ವಿಘಟದೂರ ರಾಮೇಶ್ವರಲಿಂಗ' ಎಂತಲೂ ಅವನ ಮುದ್ರಿಕೆಯು ಇದೆ. ವಿಘಟ ಎಂದರೆ ಭೇದ. ಭೇದಕ್ಕೆ ದೂರನಾದ ಪರಮಾತ್ಮನೆಂಬ ಭಾವವು ಇದರಲ್ಲಿದೆ.

ಮೆರೆಮಿಂಡದೇವನು ೬೩ ಪುರಾತನರಲ್ಲಿ ಒಬ್ಬನಿದ್ದಾನೆ. ಈ ಪುರಾತನರೆಲ್ಲರೂ ತಮಿಳು ದೇಶದವರಿದ್ದು ಅವರಲ್ಲಿ ಕರ್ನಾಟಕದ ವೀರಶೈವ ಸಂಸ್ಕೃತಿಯನ್ನು ಕುರಿತು ಇವನೊಬ್ಬನ ಹೊರ್ತು ಬೇರೆ ಯಾರೂ ನಿರೂಪಿಸಿದಂತೆ ತೋರುವದಿಲ್ಲ. ಇದೊಂದು ಈತನ ಚರಿತ್ರೆಯಲ್ಲಿ ಲಕ್ಷಿಸತಕ್ಕ ಮಹತ್ವದ ಸಂಗತಿಯಾಗಿದೆ.

ಶಿವಾನುಭವವು ಸ್ತ್ರೀಪುರುಷರಲ್ಲಿ ಮತ್ತು ಜಾತಿಜಾತಿಗಳಲ್ಲಿ ಭೇದವನ್ನು ಎಣಿಸುವದಿಲ್ಲ. ವೀರಶೈವರೆಲ್ಲರೂ ಸಮಾನರೆಂದು ಅದು ಯಾವಾ

ಗ್ರಂಥಾಲಯ

ಇಷ್ಟೇ ಅಲ್ಲ, ಅದು ಭಕ್ತಿ, ಗುರು, ಲಿಂಗ,
ಗಳಲ್ಲೂ ಪ್ರತಿಪಾದಿಸುತ್ತದೆ. ಇವುಗಳಲ್ಲಿಯೂ ಕೂಡ ಪರಸ್ಪರ ಸಾಮರಸ್ಯವನ್ನು ಪ್ರತಿಪಾದಿ
ಜಂಗಮ ಇವುಗಳಲ್ಲಿಯೂ ಕೂಡ ಪರಸ್ಪರ ಸಾಮರಸ್ಯವನ್ನು ಪ್ರತಿಪಾದಿ
ಸುತ್ತದೆ. ಇಂಥ ಸಮರಸಾಚರಣೆಯಿಂದ ಭಕ್ತನು ತನ್ನಲ್ಲಿ ಗುರು, ಲಿಂಗ,
ಜಂಗಮಗಳ ತತ್ವಗಳನ್ನು ಒಳಕೊಳ್ಳತಕ್ಕದ್ದು. ಹಾಗೆಯೇ ಗುರು, ಲಿಂಗ,
ಜಂಗಮಗಳು ಭಕ್ತ ಮತ್ತು ಇತರ ಆವರಣಗಳ ಮೂಲಕ ತಮ್ಮ ತಮ್ಮ
ನಡೆಗಳನ್ನು ದೃಢಪಡಿಸಿಕೊಳ್ಳತಕ್ಕದ್ದು. ಹೀಗೆ ಶಿವಾನುಭವದ ತತ್ವವಿದೆ.
ಈ ತತ್ವಕ್ಕನುಸರಿಸಿಯೇ ವೀರಶೈವಾಚರಣೆಗಳು ಕಲ್ಪಿಸಲ್ಪಟ್ಟಿರುತ್ತವೆ.
ಆದ್ದರಿಂದ ಹೇಗೆ ವೀರಶೈವರಿಗೆಲ್ಲ ಗುರು, ಲಿಂಗ, ಜಂಗಮಗಳ
ನಿಂದೆಯು ಮತ್ತು ಅನಾದರಣೆಯು ಅಸಹನೀಯವೋ ಹಾಗೆಯೇ ಭಕ್ತ
ನಿಂದೆಯೂ ಅಸಹನೀಯವಾದುದು. ಯಾರು ಇದಕ್ಕೆ ವಿರುದ್ಧವಾಗಿ
ವರ್ತಿಸುತ್ತಾರೋ ಅವರು ಶಿವಶರಣರಿದ್ದರೂ ಕೂಡ ಅವರು ತಮ್ಮ
ಮಹತ್ವವನ್ನು ಕಳೆದುಕೊಂಡಿರುವದು ಶಿವಶರಣರ ಚರಿತ್ರೆಗಳಿಂದ ತಿಳಿದು
ಬರುತ್ತದೆ. (ಹಿಂದೆ ಅಗ್ಗವಣಿಯ ಹೊನ್ನಯ್ಯ ಮತ್ತು ಓಲೆಯ ಶಾಂತಯ್ಯ
ಗಳ ಚರಿತ್ರೆಗಳನ್ನು ನೋಡತಕ್ಕದ್ದು. ಪುಟ ೮೭) ಇದರಿಂದ ವೀರಶೈವ
ಸಮಾಜದ ಸಂಘಟನೆಯಲ್ಲಿ ಮತ್ತು ಅವರ ಮಠಗಳ ವ್ಯವಸ್ಥೆಯಲ್ಲಿ ಪೂರ್ಣ
ಲೋಕಸತ್ತಾಕ ತತ್ವಗಳು ಸೇರ್ಪಡೆಯಾದದ್ದನ್ನು ನಾವು ಕಾಣಬಹುದು.
ತಿರುವಾರೂರು ಅನೇಕ ಶಿವಾಲಯಗಳಿಂದಲೂ ಶಿವಭಕ್ತರಿಂದಲೂ
ತುಂಬಿಕೊಂಡು ಚೋಳದೇಶದಲ್ಲಿ ಮನೋಹರವಾಗಿ ಕಂಗೊಳಿಸುತ್ತಿತ್ತು.
ಅಲ್ಲಿ ತಿರುವಾರೂರೇಶ್ವರ ದೇವಾಲಯವೇ ಮುಖ್ಯ ಗುಡಿಯಾಗಿತ್ತು.
ಮೆರೆಮಿಂಡದೇವನು ಶಿವಭಕ್ತಿಯಿಂದ ಕೂಡಿಕೊಂಡು ಗಣಾಚಾರವುಳ್ಳವ
ನಾಗಿ ಆ ಗ್ರಾಮದಲ್ಲಿ ಪ್ರಸಿದ್ಧನಾಗಿ ಮೆರೆಯುತ್ತಿದ್ದನು. ಆ ತಿರುವಾರೂ
ರೇಶ್ವರನ ಜಾತ್ರೆಯು ಒಂದು ದಿನ ಪ್ರಾರಂಭವಾಗಲು ಭಕ್ತರು ದಿನಾಲು
ಶಿವಾಲಯದಲ್ಲಿ ಹೆಚ್ಚಾಗಿ ಬರುತ್ತ ಇದ್ದು ರಥವನ್ನು ಎಳೆಯುವ ದಿವಸ
ಅವರು ದೇವಾಲಯದಲ್ಲಿ ತುಂಬಿ ಹೋದರು. ರಥೋತ್ಸವವನ್ನು ನೋಡ
ಲಿಕ್ಕೆ ಮೆರೆಮಿಂಡದೇವನೂ ದೇವಾಲಯಕ್ಕೆ ಬಂದಿದ್ದನು.
ಅವನು ಅಲ್ಲಿ ನಿಂತುಕೊಂಡು ನೋಡುತ್ತಿರುವಾಗ್ಗೆ ಸೌಂದರ
ಸಂಬಿಯಣ್ಣನೆಂಬ ಶಿವಭಕ್ತನು ಅತ್ಯಂತ ವೈಭವದಿಂದ ದೇವಾಲಯದ
ಹೆಬ್ಬಾಗಿಲಿಗೆ ಬಂದನು. ಅವನ ಸುತ್ತಲೂ ಕಹಳೆ ಮದ್ದಳೆಗಳೂ ಶಂಖ
ನಾದವೂ ಭೋರ್ಗರೆಯುತ್ತಿದ್ದವು. ಅನೇಕ ನರ್ತಕರೂ ಗಾಯಕರೂ



ತಮ್ಮ ಹಾಡುಗಾರಿಕೆಯನ್ನು ತೋರಿಸುತ್ತ [illegible]
ಅವನು ಉತ್ತಮತರದ ಉಡುಪುಗಳನ್ನು ಧರಿಸಿ [illegible] ಕೈಗಳಲ್ಲಿ [illegible]
ಲೆಗಳು, ಲಲಾಟದಲ್ಲಿ ಕಸ್ತುರಿ, ಮೈಯಲ್ಲೆಲ್ಲ ಚಂದನ [illegible] ಸುಗಂಧ
ಎತ್ತಲೂ ಹಬ್ಬಿರಲು ಅಶ್ವಾರೂಢನಾಗಿ ಒಳ್ಳೇ [illegible] ದೇವಾ
ಲಯಕ್ಕೆ ಬಂದು ಹೆಬ್ಬಾಗಿಲಿನಲ್ಲಿ ಇಳಿಯದೆ ಕುದುರೆಯನ್ನು ಹಾಗೆಯೇ
ಬಾಗಿಲಿನ ಒಳಗಿಂದ ನಡೆಯಿಸುತ್ತ ಎಡಬಲದಲ್ಲಿ ಅನೇಕ ಶಿವಭಕ್ತರು
ನೆರೆದಿದ್ದರೂ, ಅವರನ್ನು ನೋಡದೆ ನಮಸ್ಕರಿಸದೆ ಒಳಗೆ ಹೋಗಿ ಗುಡಿಯ
ಮುಂದೆ ಕುದುರೆಯಿಂದ ಇಳಿದು ಎಲ್ಲ ಕಡೆಗೂ ಸೊಕ್ಕೇರಿ ನೋಡುತ್ತ
ದೇವಾಲಯದ ಒಳಗೆ ಪ್ರವೇಶಿಸಿದನು.

ಮೆರೆಮಿಂಡದೇವನು ಅವನ ವರ್ತನೆಯನ್ನು ನೋಡಿ ಅತ್ಯಂತ ಕೋಪಾವಿಷ್ಟನಾಗಿ ನೆರೆದ ಭಕ್ತರಿಗೆ—ಇವನಾರು? ಶಿವಾಲಯದ ಮಹಾದ್ವಾರದಲ್ಲಿ ಕುದುರೆಯನ್ನಿಳಿಯದೆ ಒಳಗೆ ಪ್ರವೇಶಮಾಡುತ್ತಾನೆ. ಇವನ ಗರ್ವವೆಷ್ಟು ಎಂದು ನುಡಿಯಲು ನೆರೆದ ಜನರು—ಇವನು ಸೌಂದರ ಸಂಬಿಯಣ್ಣನು. ಇವನು ದೇವರಿಗೆ ಸಲುಗೆವಂತನಾಗಿದ್ದಾನೆ. ಈಶ್ವರನು ದಿನಾಲು ಇವನಿಗೆ ಪಡಿ ಹೊನ್ನು ಕೊಟ್ಟು ಇವನಿಗೆ ತನ್ನ ಪ್ರೀತಿಯನ್ನು ತೋರಿಸುತ್ತಾನೆ ಎಂದು ಹೇಳಲು, ಮೆರೆಮಿಂಡದೇವನು ಘುಡುಘುಡಿಸುತ್ತ—ಇದೇತರ ಭಕ್ತಿ? ಇಂಥವನ ಭಕ್ತಿಯನ್ನು ಶಿವನು ಕೈಕೊಳ್ಳುವನೇ? ಇವನ ನಡೆಯು ಭಕ್ತ ಸಭೆಗೆ ಹೊರತಾದದ್ದು. ಇಂಥ ಸೊಕ್ಕಿನವನಿಗೆ ಶಿವನು ಪ್ರೀತಿಸುವನೇ? ಇವನನ್ನು ಬಂಧಿಸಿರಿ ಎಂದು ಕೋಪಾಟೋಪದಿಂದ ನುಡಿಯಲು ನೆರೆದ ಭಕ್ತರು ಅವನಂತೆಯೇ ಕೋಪೋದ್ರೇಕವುಳ್ಳವರಾಗಿ ಸಂಬಿಯಣ್ಣನನ್ನು ಮುತ್ತಲು ಅವನು ಅಂಜಿ ಅವರ ಕೈಯಿಂದ ಪಾರಾಗಿ ದೇವಾಲಯದ ಗರ್ಭಗುಡಿಯನ್ನು ಪ್ರವೇಶಿಸಿ ಅದರ ಬಾಗಿಲುಗಳನ್ನು ಭದ್ರವಾಗಿ ಮುಚ್ಚಿಕೊಂಡನು.

ಆಗ ನಂಬೆಣ್ಣನ ಕುದುರೆಯೊಂದೆಸೆ, ಅವನ ತುರಾಯಿಯೊಂದೆಸೆ, ಅವನ ಪರಿವಾರ ಒಂದೆಸೆಯಾಗಿ ಬಿಟ್ಟವು. ನಂಬೆಣ್ಣನು ಗಾಬರಿಯಾಗಿ ಕಂಪಿಸುತ್ತ ದೇವರೆದುರಿಗೆ ನಿಂತು—ದೇವರೇ ನಿನ್ನ ನಂಬಿದ ನಂಬಿಗೆ ನಿನ್ನೆದುರಿಗೆ ಹೀಗಾಗಬೇಕೇ? ನನ್ನನ್ನು ಇವರು ಕೊಲ್ಲಲು ಸಿದ್ಧರಾಗಿದ್ದಾರೆ. ನನ್ನನ್ನು ಕಾಯಿ ಎಂದು ಆರ್ತಸ್ವರದಿಂದ ರೋದಿಸುತ್ತ ದೇವರ ಕಾಲನ್ನು ಹಿಡಿದನು.

ಆಗ ಶಂಕರನು ಲಿಂಗ ಮಧ್ಯದಿಂದ ಹೊರಗೆ ಬಂದು ಅವನೂ ಗಾಬರಿಯಾದವನಂತೆ ನಟಿಸುತ್ತ— ಮಗನೇ, ನೀನೇಕೆ ಭಕ್ತರನ್ನು ವಂದಿಸದೆ ಇಲ್ಲಿಗೆ ಬಂದೆ? ನನಗೂ ಭಕ್ತರಿಗೂ ಹೀಗೆ ಅಂತರಿಸಬಹುದೇ? ನಾನು ಭಕ್ತಕಾಯನೆಂಬುದನ್ನು ನೀನು ಮರೆತೆಯಾ ಎಂದು ಕೇಳಲು, ನಂಬಿಯು. ನೀನು ಸಹ ಭಕ್ತರಿಗೆ ಹೀಗೆ ಅಂಜಿದರೆ ನನ್ನ ಪಾಡೇನು? ನಾನು ಉಳಿಯುವುದೆಂತು? ಎಂದು ಮತ್ತಿಷ್ಟು ಗಟ್ಟಿಯಾಗಿ ರೋದಿಸಹತ್ತಿದನು.

ಇತ್ತ ಮೆರೆವಿಂಡದೇವನು ಗರ್ಭಗುಡಿಯ ಮುಚ್ಚಿದ ಒಳಬಾಗಿಲುಗಳು ತೆರೆಯದ್ದನ್ನು ನೋಡಿ ಖತಿಗೊಂಡು—ಶಂಕರನೂ ನಂಬಣ್ಣನೂ ಒಂದಾಗಿದ್ದಾರೆ. ಅವರು ಬಾಗಿಲನ್ನು ತೆರೆಯುವದಿಲ್ಲ. ದೇವರು ಶಿವಭಕ್ತರನ್ನು ಮೀರಿದವರೊಡನೆ ಮತ್ತು ಅವರನ್ನು ಕಣ್ಣೆತ್ತಿ ನೋಡದವರೊಡನೆ ಸ್ನೇಹ ಮಾಡಿದ್ದಾನೆ. ಆದ್ದರಿಂದ ಭಕ್ತರನ್ನು ಒಲ್ಲದ ಈಶನನ್ನು ಭಕ್ತರಿಂದ ಹೊರಗು ಮಾಡಬೇಕು, ಅವನನ್ನು ಬಹಿಷ್ಕರಿಸಬೇಕು, ಎಂದು ಹೇಳಿ ಯಾವ ಭಕ್ತನೂ ಶಿವನನ್ನು ಪೂಜಿಸಬಾರದು, ಅವನನ್ನು ಹೊರಗಿಡಬೇಕೆಂದು ಡಂಗುರ ಹೊಡಿಸಿದನು.

ಗರ್ಭಗುಡಿಯೊಳಗೆ ಇದ್ದ ಈಶನೂ ಅವನ ಮುಂದಿದ್ದ ನಂಬಿಯಣ್ಣನೂ ಆ ಡಂಗುರವನ್ನು ಕೇಳಿ ಈಶನು ಭಯಪಟ್ಟು—ಭಕ್ತರ ಈ ವಿರೋಧವನ್ನು ನಾನು ಹೇಗೆ ತಡೆಯಲಿ! ಭಕ್ತರು ನನ್ನನ್ನು ಬಹಿಷ್ಕರಿಸಿದರೆ ನನ್ನನ್ನು ಕೇಳುವರಾರು? ಎಂದು ನುಡಿಯಲು ನಂಬಿಯು ಮತ್ತಿಷ್ಟು ಗಾಬರಿಗೊಂಡು ನಡುನಡುಗುತ್ತ – ಪರಮಾತ್ಮನೇ, ನಿನ್ನ ಗತಿಯು ಹೀಗಾದರೆ ನನ್ನ ಗತಿ ಏನು? ನಾನು ಸತ್ತೆನು ಸತ್ತೆನು ಎಂದು ಒರಲಹತ್ತಿದನು. ಪರಮಾತ್ಮನು ಅದನ್ನು ನೋಡಿ--ಈಗ ಮಾತ್ರ ಈ ನಂಬಿಯು ಹಾದಿಗೆ ಬಂದನು. ಭಕ್ತರೊಡನೆ ಹೇಗೆ ಆಚರಿಸಬೇಕೆಂಬುದು ಅವನಿಗೆ ಈಗ ಗೊತ್ತಾಯಿತು ಎಂದು ತಿಳಿದವನಾಗಿ ಅವನಿಗೆ- ಅಂಜದಿರು, ಅಂಜದಿರು. ನಮ್ಮ ಭಕ್ತರು ಹೀಗೆ ಕ್ರೋಧವುಳ್ಳವರಾದರೂ ಅವರಿಗೆ ಯಾರು ಶರಣೆಂದೆನ್ನುವರೋ ಅವರನ್ನು ಅವರು ಕಾಯುವರು. ಇಷ್ಟೇ ಅಲ್ಲ, ಅವರಿಗೆ ತಮ್ಮನ್ನೇ ಕೊಡಲು ಮುಂದಾಗುವರು. ಆದ್ದರಿಂದ ನೀನು ಪುರಾತನ ಭಕ್ತರ ಮಹಿಮೆಗಳನ್ನು ಹಾಡಹತ್ತು ಎಂದು ಹೇಳಿದನು. ಆಗ ನಂಬಿಯಣ್ಣನು ನನಗೆ ಈ ಮಹಿಮರ ಚರಿತ್ರೆಗಳು ಲಕ್ಷದಲ್ಲಿ ಏನೂ ಉಳಿದಿಲ್ಲ. ಇಷ್ಟೇ ಅಲ್ಲ, ಅವರ ಹೆಸರುಗಳನ್ನು ಸಹ ಮರೆ



ಗ್ರಂಥಾಲಯ 103

ತುಬಿಟ್ಟದ್ದೇನೆ. ಅಂದಬಳಿಕ ಅವರ ಚರಿತ್ರೆಗ[illegible] ಹಾಡಲಿ ಎಂದು ಅಂದನು. ಆಗ ತಿರುವಾರೂರೇಶ್ವರನು ಪ್ರಸನ್ನ ಮುದ್ರೆ[illegible] ನಂಬಿಯಣ್ಣನೇ ಕೇಳು, ಇನ್ನುಮೇಲೆ ನೀನು ಭಕ್ತ[illegible], ಪುರಾತನರ ಹೆಸರುಗಳನ್ನೂ ಅವರ ದಿವ್ಯ ಚರಿತ್ರೆಗಳನ್ನೂ ನಿನ್ನ ಸ್ಮರಣೆಗೆ ತಂದು ಕೊಡುತ್ತೇನೆ. ಅವರನ್ನು ಹಾಡಹತ್ತು ಎಂದು ಒರೆದನು. ಆಗ ನಂಬಿಯಣ್ಣನ ಮನಸ್ಸಿನಲ್ಲಿ ಏನೋ ಒಂದು ಝುಗ್ಗನೇ ಪ್ರಕಾಶವು ಬಿದ್ದಿತು. ಅವನಲ್ಲಿ ಅಂತಃಸ್ಫೂರ್ತಿಯಾಯಿತು. ಆಗ ಅವನು ಪುರಾತನರ ಚರಿತ್ರೆಗಳನ್ನು ತಿರುಪಾಡುಗಳ ಮೂಲಕ ಹಾಡಹತ್ತಿದನು. ಅವನು ತಿರುನೀಲಕಂಠ, ಇಹಪ್ಪಗೆಯಾಂಡ, ಇಳಿಯಾಂಡಗುಡಿಮಾರ, ಸೇದಿರಾಜ ಮೊದಲಾದ ೬೩ ಪುರಾತನರ ಚರಿತ್ರೆಗಳನ್ನು ವೀಣೆಯ ನಾದದಲ್ಲಿ ಹಾಡಹತ್ತಿದನು. ಆಗ ಪರಮಾತ್ಮನೇ ಅವನ ಮೂಲಕ ಹಾಡುತ್ತಾನೋ ಎನ್ನುವಂತೆ ಭಾಸವಾಯಿತು. ನಂಬಿಯಣ್ಣನು ಹಾಡುತ್ತ ಹಾಡುತ್ತ ಗರ್ಭಗುಡಿಯ ಬಾಗಿಲುಗಳ ಕಡೆಗೆ ಬರಲು ಆ ಬಾಗಿಲುಗಳು ತಾವಾಗಿಯೇ ತೆರೆದವು. ಅಷ್ಟರಲ್ಲಿ ಪರಮಾತ್ಮನು ಒಳಗೆ ಅಂತರ್ಧಾನನಾಗಿದ್ದನು. ಆದರೆ ಹೊರಗೆ ಮಾತ್ರ ಕ್ರೋಧಾವಿಷ್ಟರಾದ ಭಕ್ತ ಜನರು ಮುಕುರಿದ್ದರು. ಆದರೆ ನಂಬಿಯಣ್ಣನ ತಿರುಪಾಡಿನ ದನಿಯು ಅವರ ಕಿವಿಗೆ ಬಿದ್ದಕೂಡಲೆ ಅವರ ರೋಷವು ತತ್‌ಕ್ಷಣವೇ ಅಡಗಿತು. ಅವನು ಪುರಾತನರನ್ನು ತನ್ನ ದಿವ್ಯ ಸ್ವರದಿಂದ ಸ್ತುತಿಸುತ್ತ ಮುಂದುವರಿದನು. ಅದನ್ನು ಕೇಳಿದ ಬಳಿಕ ಅವರ ಮನಸ್ಸಿನಲ್ಲಿ ಭಕ್ತಿರಸಪ್ರವಾಹವು ಉಕ್ಕೇರಿ ಬರಹತ್ತಿತು.

ಭಕ್ತ ಜನರ ಇದಿರಿಗೆ ಮೆರೆವಿಂಡದೇವನು ನಿಂತಿದ್ದನು. ಅವನು ತನ್ನ ಮುಂದೆ ತಿರುಪಾಡುಗಳನ್ನು ಹಾಡುತ್ತ ಬರುವ ನಂಬಿಯಣ್ಣನನ್ನು ಕಂಡು—ನಂಬಿಯಣ್ಣನಿಗೆ ಇದೆಲ್ಲಿಯ ಭಕ್ತಿ? ಇದು ಹೊಸತಾದದ್ದು. ನನಗೆ ತಿಳಿಯದೆ ಪರಮಭಕ್ತನಾದ ಇವನೊಡನೆ ಕೋಪಿಸಿದೆನು, ಎಂದು ಅವನಿಗೆ ಬಹಳ ಪಶ್ಚಾತ್ತಾಪವಾಯಿತು ಮತ್ತು ಅವನ ಮೊದಲಿನ ಕೋಪವು ಅಡಗಿತು. ಆಗ ಅವನು—ನಾನು ನಂಬಿಯಣ್ಣನನ್ನು ಭಂಗಿಸಿದೆನು. ಇಷ್ಟೇ ಅಲ್ಲ, ಪರಮಾತ್ಮನನ್ನು ತಿರುವಾರೂರು ಭಕ್ತರಿಂದ ಹೊರಗೆಂದು ಡಂಗುರವನ್ನು ಹೊಯಿಸಿದೆನು. ನಾನು ಪಾಪಿಷ್ಠನು. ನಾನು ಇನ್ನೇಕೆ ಜೀವಿಸುವುದು? ಶಿವದ್ರೋಹವನ್ನು ಮಾಡಿದ ತಪ್ಪಿಗಾಗಿ ನನ್ನನ್ನು ಮೃಡನಿಗೊಪ್ಪಿಸುವೆನೆಂದು ನಿರ್ಧರಿಸಿ ಹದನಾದ ಒಂದು ಖಡ್ಗವನ್ನು ತೆಗೆದು

ಕೊಂಡು ತನ್ನ ಕೊರಳನ್ನು ಕತ್ತರಿಸಿಕೊಳ್ಳುವಷ್ಟರಲ್ಲಿ ಭಕ್ತಪ್ರೇಮಿಯಾದ ಸದಾಶಿವನು ಅವನ ಸಾಹಸವನ್ನು ತಡೆದು ಅವನಿಗೆ ತನ್ನ ನಿಜರೂಪು ತೋರಿ ಅವನನ್ನು ಸಂತವಿಸಿದನು.

ಪರಮಾತ್ಮನ ಪ್ರೇರಣೆಯಾದಂತೆ ಸೌಂದರ ನಂಬಿಯಣ್ಣನು ಪುರಾತನರನ್ನು ಹಾಡುತ್ತ ತಿರುವಾರೂರಲ್ಲಿ ಸುಖವಾಗಿದ್ದನು. ಇತ್ತ ಮೆರೆಮಿಂಡದೇವನು ತನ್ನ ಶಿವಾನುಭವದಂತೆ ಆಚರಿಸುತ್ತ ಶಿವಸಾಮರಸ್ಯಪದವನ್ನು ಹೊಂದಿ ವೀರಶೈವರಲ್ಲಿ ಒಬ್ಬ ಶ್ರೇಷ್ಠ ಶಿವಶರಣನೆಂದು ಎನ್ನಿಸಿಕೊಂಡನು.

ಈ ಪ್ರಕಾರ ಸೌಂದರ ನಂಬೆಣ್ಣನು ಪಿರಿಯ ಪುರಾಣವನ್ನು ರಚಿಸಲಿಕ್ಕೆ ಕಾರಣನಾದವನು ಶಿವಶರಣನೂ ವಚನಕಾರನೂ ಶಿವಾನುಭಾವಿಯೂ ಆದ ಮೆರೆಮಿಂಡದೇವನು. ಇವನು ಮಾದರ ಚನ್ನಯ್ಯನಂತೆ ಕರ್ನಾಟಕದಿಂದ ತಮಿಳುದೇಶಕ್ಕೆ ಹೋಗಿ ವಾಸಿಸಿರಬಹುದೆಂದು ತೋರುತ್ತದೆ.

ತಮಿಳುದೇಶದಲ್ಲಿ ಕೆಲವು ಪ್ರಸಿದ್ಧ ವಿಷ್ಣು ಭಕ್ತರಾಗಿದ್ದು ಅವರಿಗೆ 'ಆಳ್ವಾರ್' ಎಂಬ ಹೆಸರಿದೆ. ಹಾಗೆಯೇ ಅನೇಕ ಶಿವಭಕ್ತರೂ ಆಗಿದ್ದು ಅವರಿಗೆ 'ಪುರಾತನ' ರೆಂಬ ಹೆಸರಿದೆ. ಅವರ ವಿಷಯವಾಗಿ ನಂಬಿಯಣ್ಣನು ಹಾಡಿದ ಪದ್ಯಗಳಿಗೆ 'ತಿರುಪಾಟು' ಎಂದರೆ ದೇವರ ಹಾಡು ಎಂಬ ಹೆಸರಿದೆ.

---

College of Commerce
Library, Bijapur.

College of Commerce
Library, Bijapur.

# ಮೆರೆಮಿಂಡದೇವನ ವಚನಗಳು.

## ನೀತಿಯಿಂದಿರುವುದು

೧. ಶರೀರ ಬೆಳೆದು ಪ್ರಳಯಕ್ಕೊಳಗು. ಬುದ್ಧಿ ಬೆಳೆದು ಸುಖಕ್ಕೊಳಗು. ಸುಖ ಬೆಳೆದು ವಿಕಾರಕ್ಕೊಳಗು. ವಿಕಾರ ಸಕಲ ಮರಣಕ್ಕೆ ಒಳಗಾಯಿತ್ತು. ಇಂತಿವಕ್ಕೆ ಹೊರಗಾಗು ಐಘಟದೂರ ರಾಮೇಶ್ವರ ಲಿಂಗವನರಿವುದಕ್ಕೆ.

೨. ಕಾಮದಲ್ಲಿ ಅಳಿದು, ಕ್ರೋಧದ ದಳ್ಳುರಿಯಲ್ಲಿ ಬೆಂದು, ಮೋಹದ ಸಮುದ್ರದಲ್ಲಿ ಮುಳುಗಿ, ನಾನಾ ಭವರಸಂಗಳನುಂಡು ಪೊರಸರಾಗಬೇಡ. ಅರಿ ಐಘಟದೂರ ರಾಮೇಶ್ವರಲಿಂಗವ.

೩. ಕಾಮವ ಬ್ರಹ್ಮಂಗಿಕ್ಕಿ, ಮೋಹವ ವಿಷ್ಣುವಿಂಗಿಕ್ಕಿ, ಲೋಭವ ರುದ್ರಂಗಿಕ್ಕಿ ಮದವ ಮದನಂಗೆ ಕೊಟ್ಟು, ಕಳೆದುಳಿಯಬೇಕು ಐಘಟದೂರ ರಾಮೇಶ್ವರ ಲಿಂಗವನರಿವುದಕ್ಕೆ.

೪. ಧನವ ಗಳಿಸಿದವ ಹೆಣನಾದ. ಧರೆಯ ಗಳಿಸಿದವ ಅರಿಸಳಿಗೆ ಒಡಲಾದ. ಕನ್ನೆಯ ಗಳಿಸಿದವ ಕುಕ್ಕುರಯೋನಿಯಲ್ಲಿ ಸಿಕ್ಕಿದಂತಾದ. ಅಟ್ಟುವಾಸಿಯಲ್ಲಿ ಕುಕ್ಕುಳುಗುದಿಯಬೇಡ. ಸತ್ಯಕ್ಕೆ ಒಳಗಾಗು. ಅಸತ್ಯಕ್ಕೆ ಹೊರಗಾಗು ಐಘಟದೂರ ರಾಮೇಶ್ವರಲಿಂಗವನರಿವುದಕ್ಕೆ.

೫. ಅಸಿಯಾಗಲಿ ಕೃಷಿಯಾಗಲಿ ಯಾಚಕ ವಾಣಿಜ ಮಸಿಯಾಗಲಿ ಮಾಡುವಲ್ಲಿ ಹುಸಿಯಿಲ್ಲದಿರಬೇಕು. ಅದು ಅಸಮಾಕ್ಷನ ಬರವು, ಪಶುಪತಿಯ ಇರವು. ಐಘಟದೂರ ರಾಮೇಶ್ವರಲಿಂಗವು ತಾನೆ.

೬. ಅತೀಂದ್ರಿಯರೆಲ್ಲರು ಮದನನ ಮನೆಯ ಬೆಸಕುಡುಕೆಯ ನೀರ ಎರೆವುದಕ್ಕೊಳಗಾದರು. ವ್ರತಿಗಳೆಲ್ಲರು ಹೊರಗೆ ಆಚಾರವನಿರಿಸಿ ಒಳಗೆ ಭವಿಸಂಗದಲ್ಲಿ ಬಳಲುತ್ತಿದ್ದಾರೆ. ನಿರಾಸೆವಂತರು ಕೊಡುವರ ಬಾಗಿಲಲ್ಲಿ ಇಕ್ಕುವರ ಮಂದಿರದಲ್ಲಿ ಸಿಕ್ಕಿ ಐದಾರೆ. ಇವಕ್ಕೆ ಹೊರಗಾಗು. ಐಘಟ ದೂರ ರಾಮೇಶ್ವರಲಿಂಗಕ್ಕೆ ಒಳಗಾಗು.

೭. ತನ್ನವರನ್ಯರಹರು ಹೆಣ್ಣು ಹೊನ್ನು ಮಣ್ಣು ಹಿಡಿದು. ಹೊರತಾಗಿ ಆ ಮೂರ ಬಿಟ್ಟಡೆ ಅನ್ಯರು ತನ್ನವರಹರು. ಅರಿದವಂಗೂ ಸರಿ. ಜಗದ ಒಡಲಾದವಂಗೂ ಸರಿ. ಆಸೆ ಒಂದೇ ಭೇದ. ಉಭಯಕ್ಕೆ ಹೊರಗಾಗು, ಐಘಟ ದೂರ ರಾಮೇಶ್ವರ ಲಿಂಗವನರಿವುದಕ್ಕೆ.

೮. ಆಸೆ ತ್ರಿವಿಧದ ಗೊತ್ತು. ನಿರಾಸೆ ಏಕ ಮಯನ ಗೊತ್ತು. ಅಲ್ಲ ಅಹುದೆಂಬುದು ಬಲ್ಲವನ ಮತವಲ್ಲ. ಎಲ್ಲಿಯೂ ಸದ್ಗುಣ ಎಲ್ಲರಲ್ಲಿ ನಿಜಭಾವ ಪರಿಪೂರ್ಣ ತಾನಾಗಿರಬೇಕು ಐಘಟ ದೂರ ರಾಮೇಶ್ವರ ಲಿಂಗವನರಿವುದಕ್ಕೆ.

೯. ಕರ್ತೃಭೃತ್ಯ ಭಾವವಾದಲ್ಲಿ ಸರಸ ಸುರತಸಂಗ ಪರಿಹಾಸಕಂಗಳಿಂದ ಮಾಡುವುದು ಮಾಡಿಸಿಕೊಂಬುದು ಉಭಯದ ಕೇಡು. ಅದು ನಿರಸವಾಗಿರಬೇಕು ಐಘಟ ದೂರ ರಾಮೇಶ್ವರ ಲಿಂಗವನರಿವುದಕ್ಕೆ.

೧೦. ಅಂಗವ ಕಳೆದು ನಿಂದ ವಿಹಂಗ ವೈರಿಯಂತೆ, ಅಂಗಕ್ಕೆ ಅಸು ಹೊರತೆಯಾಗಿ ನಿಂದುದು ಅದರಂಗ ಶುದ್ಧ. ಅದರಂದವಿರಬೇಕು. ತ್ರಿವಿಧವ ಹಿಡಿದ ಚಂದ ಐಘಟ ದೂರ ರಾಮೇಶ್ವರ ಲಿಂಗವನರಿವುದಕ್ಕೆ.

೧೧. ಭಾಷೆ ತಪ್ಪಿದ ಬಂಟ, ನಿಹಿತವಿಲ್ಲದವನ ಅರಿವು, ಧಾತನರಿಯದವನ ದೊರೆತನ ತೂತು ಕುಂಭದ ಏತದ ಘಾತದಂತೆ ಐಘಟ ದೂರ ರಾಮೇಶ್ವರಲಿಂಗ.

೧೨. ಠಕ್ಕರಂಗೆ ವಾಚಕ, ಭೂಪತಿಗೆ ದೇಸಿ, ಅಜಾತಂಗೆ ನಿಶ್ಚಯ, ನೇಮಂಗೆ ಖಂಡಿತ ಭಾವ ನಿರ್ಧರವಾಗಬೇಕು ಐಘಟ ದೂರ ರಾಮೇಶ್ವರಲಿಂಗದನರಿವುದಕ್ಕೆ.

೧೩. ಎಂಬತ್ತು ನಾಲ್ಕು ಲಕ್ಷ ಜೀವವ್ರತ, ಐವತ್ತಾರು ನೇಮವ್ರತ, ಅರುವತ್ತು ನಾಲ್ಕು ಶೀಲವ್ರತ, ಮೂವತ್ತಾರು ಆಚಾರವ್ರತ, ತ್ರಿವಿಧ ಕ್ರಿಭಾವ ನೇಮವ್ರತ ಇಂತಿವರಲ್ಲಿ ಶುದ್ಧಾತ್ಮನಾಗಿ ಅರಿದುದೇ ಜೀವನ್ಮುಕ್ತವ್ರತ ಐಘಟ ದೂರ ರಾಮೇಶ್ವರ ಲಿಂಗದಲ್ಲಿ ಸರ್ವ ಅವಧಾನಿಯ ಕ್ರಿಶುದ್ಧತೆ.

೧೪. ಐಶ್ವರ್ಯವುಳ್ಳವಂಗೆ ನಿಜಭಕ್ತಿಯಿಲ್ಲ. ಡಂಭಕದ ವೇಷಧಾರಿಗೆ ನಿಜತತ್ವದ ಜ್ಞಾನವಿಲ್ಲ. ಕುಟಿಲರ ನೆಮ್ಮುಗೆಗೆ ಘನಲಿಂಗದ ನೆಮ್ಮುಗೆಯಿಲ್ಲ ಐಘಟ ದೂರ ರಾಮೇಶ್ವರಲಿಂಗ.



೧೫. ಶಬ್ದ ಶಾಸ್ತ್ರಂಗಳಲ್ಲಿ ತಿಳಿದು, ನ್ಯೂನಾದಿಗಳಿಲ್ಲದೆ ನುಡಿದು, ತ್ರಿವಿಧದೊಳಗೆ ಹುದುಗಿ, ಭವಪಾಶದ ಪಾಕುಳದಲ್ಲಿ ಬಿದ್ದು, ನಿಶ್ಚಟ ಭಕ್ತನೆಂದಡೆ ಒಪ್ಪುವನೇ ಐಘಟ ದೂರ ರಾಮೇಶ್ವರಲಿಂಗವು?

೧೬. ಭಕ್ತಿ ಹೋಯಿತ್ತು ಗುರುವಿನಲ್ಲಿ ಇದಿರಾಂತಲ್ಲಿ. ಭಕ್ತಿ ಹೋಯಿತ್ತು ಜಂಗಮದಲ್ಲಿ ಸಂದೇಹವ ಮಾಡಲಿಕ್ಕೆ. ಭಕ್ತಿಹೋಯಿತ್ತು ಲಿಂಗದ ಅಂಗಧ ಸಂಗವನರಿಯದೆ. ಅರ್ಥಿಗಾರಿಕೆಯಲ್ಲಿ ಮಾಡುವ ವ್ಯರ್ಥರ ಭಕ್ತಿ ಇತ್ತಲೆ ಉಳಿಯಿತ್ತು ಐಘಟ ದೂರ ರಾಮೇಶ್ವರ ಲಿಂಗವನರಿಯದೆ.

---

## ಕ್ರಿಯಾಜ್ಞಾನಗಳ ರೀತಿ ಮತ್ತು ಅವುಗಳ ಶುದ್ಧತೆ.

೧೭. ಕುಂಭ ಘಟದಂತೆ ಕುರಹಾಗಿ ತುಂಬಿದ ಜಲದಂತೆ ಮನವಾಗಿ ತಂಡುಲದಂತೆ ಚಿತ್ತ ಶುದ್ಧವಾಗಿ ಮಾಡುವ ಕ್ರಿ ಅಗ್ನಿಯಂತಾಗಿ ಇಂತಿವು ಕೂಡಿ ಘಟಿಸಿ ಕ್ರಿ ಜ್ಞಾನ ಶುದ್ಧವಾಗಿ ಅರಿಯಬೇಕು ಐಘಟ ದೂರ ರಾಮೇಶ್ವರಲಿಂಗವನರಿವುದಕ್ಕೆ.

೧೮. ಕೈಕಾಲಿನಲ್ಲಿ ಕೊಂಡಡೇನು ಬಾಯಿಗೆ ಬಂದಲ್ಲದೆ ಒಡಲಿಡೆಯಿಲ್ಲ. ಮಾತಿನಲ್ಲಿ ಆಡಿದಡೇನು, ಮನದಲ್ಲಿ ಅರಿದಡೇನು? ಆ ಇರವು ಆತನ ಮುಟ್ಟಬೇಕು ಐಘಟ ದೂರ ರಾಮೇಶ್ವರಲಿಂಗವನರಿವುದಕ್ಕೆ.

೧೯. ಆಡುವಾತ ಗಣಮಿಣೆಯಲ್ಲಿ ಕುಣಿದಡೆ ಕೆಳಗೆ ನೋಡುವಾತನಿಗೆ ಆಶ್ಚರ್ಯವಾದಂತೆ, ವಸ್ತುವಿನ ಕೂಟದ ಆಟ ಮರ್ತ್ಯರ ಬೇಟ ನಿಶ್ಚಯವಾಗಿರಬೇಕು ಐಘಟ ದೂರ ರಾಮೇಶ್ವರಲಿಂಗಕ್ಕೆ.

೨೦. ನಾನಾ ಫಲವ ಸಲಹುವಲ್ಲಿ ಮೂಲದ ವೇಳೆಯನರಿತು ನೀರನೆರೆಯಬೇಕು. ವ್ರತ ನೇಮ ಕೃತ್ಯ ನಿತ್ಯವ ಮಾಡುವಲ್ಲಿ ಅತಿಶಯನಾಗಿರಬೇಕು. ಪಟುಭಟನಾದಲ್ಲಿ ಉಭಯದಳ ಪಿತಾಮಹನಾಗಿರಬೇಕು. ಗತಿಬಟ್ಟೆಯ ತೋರುವ ಚರ ಗುರುದ್ವಯ ಗತಿ ಮಹನಾಗಿರಬೇಕು ಐಘಟ ದೂರ ರಾಮೇಶ್ವರಲಿಂಗವನರಿವುದಕ್ಕೆ.

೨೧. ಅಪ್ಪುವಾಸವ ತುಂಬುವ ತಿಪ್ಪಣದಂತೆ, ತುಂಬುವಲ್ಲಿ ಕಟ್ಟಿಲ್ಲ. ಸೂಸುವಲ್ಲಿ ಪ್ರಮಾಳದಂತೆ ಅರಿವಿನಭೇದ. ಇಷ್ಟದ ಮುಟ್ಟು ಕಟ್ಟಳೆಯ ಗೊತ್ತನರಿಯಬೇಕು ಐಘಟ ದೂರ ರಾಮೇಶ್ವರಲಿಂಗವ ನರಿವುದಕ್ಕೆ.

೨೨. ಲಕ್ಷಿಸಿ ಕಂಡೆಹೆನೆಂದಡೆ ಅಲಕ್ಷ ಅನಾಮಯ. ಅದನುಳಿದು ಕಂಡೆಹೆನೆಂದಡೆ ಮಿಕ್ಕಾವವು ವ್ಯತಕಾಯ. ಉಭಯವನರಿದು ವಿಚಾರಿಸಬೇಕು ಐಘಟ ದೂರ ರಾಮೇಶ್ವರಲಿಂಗವ.

೨೩. ಮನೆಯ ಹೊರಗಿದ್ದವನ ಮನೆಯ ಒಳಗಿದ್ದವ ಕರೆದಡೆ ವಿರೋಧವುಂಟೇ ಅಯ್ಯ? ಕ್ರಿ ಹೊರಗಾಗಿ ಆತ್ಮನೊಳಗಾದಲ್ಲಿ ನಾನೀ ನೆಂಬನ್ನಕ್ಕ ಕ್ರಿ ಶೂನ್ಯವಿಲ್ಲದಿರಬೇಕು ಐಘಟ ದೂರ ರಾಮೇಶ್ವರ ಲಿಂಗವ ನರಿವುದಕ್ಕೆ.

೨೪. ಪಾಕವನರಿತು ಮಾಡುವ ಗರತಿಯಂತೆ, ಲಾಗನರಿತು ಲಂಘಿಸುವ ವನಚರನಂತೆ, ಮೇಘವನರಿತು ಕರೆವ ಭೇಕನಂತೆ, ಉಚಿತ ಕಾಲಂಗಳಲ್ಲಿ ಮಾಡುವ ಸತ್ಕ್ರಿ ಲಿಂಗಕ್ಕೆ ಅರಿದು ಕೂಡುವುದು ಘನ ವಸ್ತುವಿನಲ್ಲಿ. ಉಭಯ ಭಾವದಲ್ಲಿ ನಿಂದು ಮತ್ತೆರಡಳಿಯಬೇಕು ಆ ಕುರುಹಿನಲ್ಲಿ ಐಘಟದ ದೂರ ರಾಮೇಶ್ವರಲಿಂಗವನರಿವುದಕ್ಕೆ.

೨೫. ಇಛ್ಛಾಶಕ್ತಿರೂಪಾಗಿ ಬ್ರಹ್ಮಪದವಾಯಿತ್ತು. ಕ್ರಿಯಾಶಕ್ತಿ ರೂಪಾಗಿ ವಿಷ್ಣುಪದವಾಯಿತ್ತು. ಜ್ಞಾನ ಶಕ್ತಿ ರೂಪಾಗಿ ರುದ್ರಪದವಾಯಿತ್ತು. ತ್ರಿವಿಧ ಪದ ಕೂಡಿ ಕಾಮನಾಸ್ತಿಯಾಯಿತ್ತು ಐಘಟ ದೂರ ರಾಮೇಶ್ವರಲಿಂಗವನರಿಯದೆ.

೨೬. ಅಂಬುಜಾತ ದ್ವಾರವಳಿವೊಳವಾದಡೆ ನಾದಕ್ಕೆ ಸಿಕ್ಕುಂಟೇ ಅಯ್ಯ? ಶರೀರ ಸಂಪದದಲ್ಲಿದ್ದಡೆ ಅರಿವು ಮಹದಲ್ಲಿ ನಿಂದು ನೆರೆ ವಸ್ತು ತಾನಾದಲ್ಲಿ ಬೇರೊಂದೆಡೆಯುಂಟೇ? ಕರಣಂಗಳ ಹಿಂಡೆಗೆ ಉರಿಯೆದ್ದು, ನೆಲೆ ನಷ್ಟವಾಗಿಯಲ್ಲದೆ ಬೇರೊಂದ ಹಿಡಿಯಲಿಲ್ಲ. ಅದು ಐಘಟ ದೂರ ರಾಮೇಶ್ವರಲಿಂಗವು ತಾನೆ.

೨೭. ವಿಷದೇಹಿಗೆ ಆಹಾರ ಒದಗದೆ, ನಸು ಸುಳುಹ ಭುಂಜಿಸುವಂತೆ ಕ್ರಿ ಶುದ್ಧತೆಯಲ್ಲಿ ಒದಗಲರಿಯದಿರೆ ಮಾಡುವ ಆಚರಣೆ



ಮಾರ್ಗವಾಗಬೇಕು. ಎಯ್ದದಿರೆ ಮಾನ್ಯರ ಕಂಡು ಮನ್ನಣೆಯಾಗಿರಬೇಕು. ಈ ಭಾವ ಏನೂ ಇಲ್ಲದಿರೆ ಐಘಟ ದೂರ ರಾಮೇಶ್ವರ ಲಿಂಗಕ್ಕೆ ದೂರ.

೨೮. ಸ್ವಪ್ನದ ಭಾಷೆ ಮರ್ತ್ಯರ ಮುಟ್ಟದ ಭಕ್ತಿ ಚಿತ್ರವನರಿಯದೆ ಕಾಡುವನ ಯುಕ್ತಿ ವೃತ್ತಿಕೆಯ ಬೊಂಬೆಯು ಅಪ್ಪುವಿನ ಮಂದಿರಕ್ಕೆ ಹೋದಂತಾಯಿತ್ತು. ಐಘಟ ದೂರ ರಾಮೇಶ್ವರಲಿಂಗವನರಿ.

೨೯. ದ್ವೈತವಳಿದು ಅದ್ವೈತವಾಗಬೇಕು. ಜ್ಞಾನವಳಿದು ಕ್ರಿಯಲ್ಲಿ ಸಂದು ದಿವ್ಯಜ್ಞಾನವಾಗಬೇಕು. ಹಾಲುವೊಗುವಲ್ಲಿ ನೀರ ಬೆರಿಸಿದಂತೆ, ಅದು ಹೊತ್ತುದಕ್ಕೆ ವಾರಿ ನಿಂದಂತಾಗಬೇಕು, ಐಘಟ ದೂರ ರಾಮೇಶ್ವರಲಿಂಗವನರಿವುದಕ್ಕೆ.

೩೦. ಅರಿವೆಂಬುದೇ ಕ್ರಿ, ಕ್ರಿಯೆಂಬುದೇ ನಿರವಯ. ಅದೆಂತೆಂದೊಡೆ, ಧರೆಯ ವಾರಿಯ ವಾಯು ಆಕಾಶಕ್ಕೆ ತಂದು ಸುರಿವಂತೆ, ಬಾವಿಯ ನೀರ ಭಾಜನ ತಂದು ಕೊಡುವಂತೆ, ಇಷ್ಟಲಿಂಗದ ನಿಷ್ಠೆ ದೃಷ್ಟವಾದಲ್ಲಿ, ವಸ್ತುವ ಕಟ್ಟಿ ತಂದು ಕೊಡುವುದು. ಕೊಡುವುದಕ್ಕೆ ಸಂದೇಹವಿಲ್ಲ. ಅದಕ್ಕೆ ದೃಷ್ಟವ ಕೇಳುವುದಕ್ಕೆ ಅನ್ಯ ಭಿನ್ನಕ್ಕೆ ತೆರಪಿಲ್ಲ. ಐಘಟ ದೂರ ರಾಮೇಶ್ವರಲಿಂಗಕ್ಕೆ ಸಾವಯ ನಿರವಯವೆಂಬುದಿಲ್ಲ.

೩೧. ಸತ್ಕ್ರಿಯೆಂಬುದೇ ಜ್ಞಾನ. ಜ್ಞಾನದೊಡಲೇ ಕ್ರಿ. ಸುಗಂಧವ ನಿರಿಸಿಕೊಂಡಿಪ್ಪ ಕರಂಡದಂತೆ, ಆ ಒಡಲಿಲ್ಲದೆ ಗಂಧವಿರಬಲ್ಲುದೇ? ಐಘಟ ದೂರ ರಾಮೇಶ್ವರಲಿಂಗವು ಕುರುಹಾಗಿ ಅರಿವ ಇರಿಸಿಕೊಂಡಿದ್ದಿತ್ತು.

---

## ಅರ್ಪಣದ ರೀತಿ.

೩೨. ಪ್ರಸಾದವ ಕೊಂಡಲ್ಲಿ ಪ್ರಾಣದಾಸೆ ಇಲ್ಲದಿರಬೇಕು. ಭಕ್ತಿಯ ಹೆತ್ತಲ್ಲಿ ನಿಜ ನಿಶ್ಚಯವಿರಬೇಕು. ಅದು ಸಚಿತದ ನಿಶ್ಚಟದಿರವು ಐಘಟ ದೂರ ರಾಮೇಶ್ವರಲಿಂಗವನರಿವುದಕ್ಕೆ.

೩೩. ಮನ ಮುಟ್ಟದ ಪೂಜೆ ಮಣ್ಣಗೋಡೆಯ ತೊಳೆದು ನಿರ್ಮಲವನರಸುವನಂತೆ. ವಸ್ತುವ ಮುಟ್ಟದ ಅರ್ಪಿತ ಕುಕ್ಕುರ ಅಸ್ತಿಯ ಕಡಿದು

ತನ್ನಯ ಶೋಣಿತಕ್ಕೆ ಚಪ್ಪಿರಿವಂತೆ. ಇದು ನಿಶ್ಚಯದ ಮುಟ್ಟಲ್ಲ, ಆ ಐಘಟ ದೂರ ರಾಮೇಶ್ವರಲಿಂಗವನರಿವುದಕ್ಕೆ.

೩೪. ತಾ ಮೀವನ್ನಕ್ಕ ಲಿಂಗಕ್ಕೆ ಮಜ್ಜನ. ತಾನುಂಬನ್ನಕ್ಕ ಲಿಂಗಕ್ಕೆ ನೈವೇದ್ಯ. ತನ್ನ ತನು ಭೋಗವ ಮಾಡುವನ್ನಕ್ಕ ಲಿಂಗಾರ್ಪಿತ ಮುಖ ವಾಗಬೇಕು. ಇದು ಸದ್ಭಕ್ತ ಮಾರ್ಗದಿರವು ಐಘಟ ದೂರ ರಾಮೇಶ್ವರಲಿಂಗವನರಿವುದಕ್ಕೆ.

೩೫. ಪಾದ ತೀರ್ಥವ ಕೊಂಡಲ್ಲಿ ತೃಷೆಯರತು, ಪ್ರಸಾದವ ಕೊಂಡಲ್ಲಿ ಹಸಿವರತು, ಭೃತ್ಯಭಾವವಾದಲ್ಲಿ ನಾನೀನೆಂಬುದಿಲ್ಲದೆ, ಅಹಂ ಕಾರ ವಿಸರ್ಜನವಾಗಿರಬೇಕು ಐಘಟ ದೂರ ರಾಮೇಶ್ವರಲಿಂಗವನರಿವುದಕ್ಕೆ.

---

## ಇಷ್ಟಪ್ರಾಣಭಾವ ಲಿಂಗಗಳು.

ವಾಯುಪಟವಾಡುವಲ್ಲಿ ಹಿಡಿದವನ ಕೆಯ್ಯಲ್ಲಿ ನೂಲು ಸಿಕ್ಕಿ ಆಡು ವಂತೆ ತನ್ನಯ ಅರಿವು ಕುರುಹಿನಲ್ಲಿ ಸಿಕ್ಕಿ ಎಡೆಬಿಡುವಿಲ್ಲದಾಡಬೇಕು ಐಘಟ ದೂರ ರಾಮೇಶ್ವರಲಿಂಗವನರಿವುದಕ್ಕೆ.

೩೭. ಮೊನೆಯಿರಿವಡೆ ಕರವಿಡಿಯಲ್ಲಿ ಇರಿದಲ್ಲದಾಗದು. ಮನ ಅರಿವಡೆ ಕುರುಹಿನ ನಿರಿಗೆಯಲ್ಲಿ ಸಲೆ ನಿಂದು ನಿಂದಲ್ಲದಾಗದು. ಕ್ರಿಭಾವ ಶುದ್ಧವಾಗು ಐಘಟ ದೂರ ರಾಮೇಶ್ವರಲಿಂಗವನರಿವುದಕ್ಕೆ.

೩೮. ಪಶು ವಾಹನವ ಕಟ್ಟುವದಕ್ಕೆ ನೆಟ್ಟಗೋಲಿಲ್ಲದೆ ಕಟ್ಟಲಿಲ್ಲ. ಅಸು ಆತ್ಮನ ಕಟ್ಟುವ ಗೊತ್ತು ಇಷ್ಟದ ನಿಷ್ಠೆಯಿಂದ ಸ್ಥಾಣು ಕಟ್ಟ ವಡೆಯಬೇಕು. ಇದು ನಿಶ್ಚಯವೆಂದರಿ ಐಘಟ ದೂರ ರಾಮೇಶ್ವರಲಿಂಗ ವನರಿವುದಕ್ಕೆ.

೩೯. ಗರ್ಭದಲ್ಲಿ ಶಿಶು ಬಲಿದು ಹಸಿದೆನೆಂದು ಅತ್ತುದುಂಟೇ ಅಯ್ಯ? ಬೆಸನಾಗಿ ಪ್ರತಿರೂಪಿಂಗೆ ಕುಚಕ್ಷೀರವಲ್ಲದೆ ಘಟದಿಂದಡಗಿದಲ್ಲಿ ಸುಖ ತಾಯ ಇರವಿನಲ್ಲಿ ನಿಂದಂತೆ ಉಭಯದ ಭೇದ ಇಷ್ಟಲಿಂಗ ಸಂಬಂಧ ಯೋಗ ಐಘಟ ದೂರ ರಾಮೇಶ್ವರಲಿಂಗವನರಿವುದಕ್ಕೆ ಇದಿ ರಿಟ್ಟ ಭೇದ.



೪೦. ವಾಯುವೆದ್ದು ಪರ್ಣ ತೃಣ ಘಟವನೆತ್ತುವಂತೆ ಮನಸಿದು ಘಟವ ಕೊಂಡುಹೋದಂತೆ, ಚಿತ್ತ ನೆನೆದು ಇಷ್ಟದಲ್ಲಿನಿಂದು ಇಷ್ಟವ ಕೊಂಡು ಐಬಬೇಕು. ಇದು ನಿಶ್ಚಯದ ಗೊತ್ತು ಐಘಟ ದೂರ ರಾಮೇಶ್ವರಲಿಂಗವನರಿವುದಕ್ಕೆ.

೪೧. ಕಂಡುಹಿಡಿವುದಿದು ಘಟದ ಭೇದ. ಕಾಣದರಸೂದು ಆತ್ಮನ ಭೇದ. ಕಂಡುದ ಕಾಣದುದ ಹಿಂಗಿ ಕೂಡುದು ಅರಿವಿನ ಭೇದ. ತ್ರಿವಿಧ ನಿಂದಲ್ಲಿ ಐಘಟ ದೂರ ರಾಮೇಶ್ವರಲಿಂಗನ ನಿಲವು ಅಸಾಧ್ಯ.

೪೨. ಮರದ ಘಟಕ್ಕೆ ತೊಗಲ ಬಿಗಿದು ಹೊಡೆಯೆ, ಅದು ಒಡ ಗೂಡೆ ನಾದವಾಯಿತ್ತು. ಈ ತೊಡಕಿನ ಭೇದ ಒಡಗೂಡುವ ಲಿಂಗದ ಭಾವ ಕುರುಹಿನ ನೆಮ್ಮುಗೆಯನರಿ ಐಘಟ ದೂರ ರಾಮೇಶ್ವರಲಿಂಗ ವನರಿವುದಕ್ಕೆ.

೪೩. ಫಲ ರಸವನಿರಿಸಿಕೊಂಡಿದ್ದಂತೆ ನೆಲ ನಿಧಾನವನಿರಿಸಿಕೊಂಡಿ ದ್ದಂತೆ ತಾಯ ಗರ್ಭದಲ್ಲಿ ಶಿಶುವ ಆರೈಕೆಯಲ್ಲಿ ತಾಳಿಕೊಂಡಿಪ್ಪಂತೆ ಇದ್ದೆಯಲ್ಲಾಗಿ ಕುರುಹಾಗಿ ಅರಿವ ಆತ್ಮನ ಮರೆಯ ಮಾಡಿಕೊಂಡಿ ದ್ದೆಯಲ್ಲಾ. ಅರಿವನರಿವುದಕ್ಕೆ ಕುರುಹಿನ ಮೂರ್ತಿಯಲ್ಲಿ ಅಂಗವ ಮರೆದು ವಸ್ತುವ ಹಿಂಗೆದಿರು ಐಘಟ ದೂರ ರಾಮೇಶ್ವರಲಿಂಗವನರಿವುದಕ್ಕೆ.

೪೪. ಕುಸುಮ ಒಣಗಿದಾಗ ಸೌರಭ ಅಡಗಿತ್ತು. ಸಾರವರ ತಾಗ ಸಸಿ ಹೊಂದಿತ್ತು. ಕುರುಹ ಮರೆದಾಗ ಅರಿವು ನಿಂದಿತ್ತು. ಐಘಟ ದೂರ ರಾಮೇಶ್ವರಲಿಂಗವು ಭಜನೆಗೊಳಗಾಗಬೇಕು.

೪೫. ಇಷ್ಟಲಿಂಗ ವಸ್ತುವನರಸುವುದಕ್ಕೆ ದೃಷ್ಟವಿಲ್ಲ. ವಸ್ತು ತಾನೇ ಕುರುಹಿನಲ್ಲಿ ನಿಂದರಿಹಿಸಿಕೊಳ್ಳಬೇಕು. ಅದೆಂತೆಂದೊಡೆ ಮಣಿದಾರವ ನೊಳಕೊಂಡು ತಾ ಕುರುಹಿಗೆ ಬಂದು ನಿಲ್ಲುವಂತೆ ವಸ್ತುವನೊಳ ಕೊಂಡ ಕುರುಹಿನ ರೂಪು ಮಣಿದಾರದಂತೆ. ಇಂತೀ ಉಭಯದ ಭೇದ ಎಡೆತೆರಪಿಲ್ಲ ಐಘಟ ದೂರ ರಾಮೇಶ್ವರಲಿಂಗವು ತಾನೇ.

೪೬. ತನ್ನ ಕಾಯ್ವ ಸೆದೆಯ ಕಾವ ಕಾಯ್ಪು ಅಂಗವುಂಟೇ ಅಯ್ಯ? ವಸ್ತು ಮುಖದಿಂದ ಎಲ್ಲವನರಿಯಬೇಕಲ್ಲದೆ ವಸ್ತು ತನ್ನ ಕಟ್ಟಿಗೆ ನಿಶ್ಚಯವೇ? ಅದು ತನ್ನ ಉಭಯದ ಕೇಡು ಐಘಟ ದೂರ ರಾಮೇಶ್ವರಲಿಂಗಕ್ಕೆ.

College of Commerce
Library, Bijapur.

೪೭. ನೀರೊಳಗಣ ಕಿಚ್ಚು ತಾಯಲ್ಲಿ ಅಡಗಿತ್ತು. ಶಿಲೆಯೊಳಗಣ ಕಿಚ್ಚು ತಾಯನುಳುಹಿ ಇದಿರ ಸುಟ್ಟಿತ್ತು. ಮರದೊಳಗಣ ಕಿಚ್ಚು ಮರನನು ಸುಟ್ಟು ಇದಿರನು ಸುಟ್ಟು ಪರಿಸ್ಪಂದಕ್ಕೆ ಹರಿಯಿತ್ತು. ಇಂತೀ ತ್ರಿವಿಧದ ಜ್ಞಾನದ ಭೇದವನರಿ ಐಘಟ ದೂರ ರಾಮೇಶ್ವರಲಿಂಗವನರಿವುದಕ್ಕೆ.

೪೮. ಮನೆಯಲ್ಲಿ ಮನುಜರು ಅಡಗುವರಲ್ಲದೆ ಮನುಜರಲ್ಲಿ ಮನೆ ಅಡಗಿದುದುಂಟೇ? ಮಾಡುವುದಕ್ಕೆ ಕರ್ತನಲ್ಲದೆ ಆ ಘಟವ ಘಟಸುವುದಕ್ಕೆ ಅಗೋಚರ ಐಘಟ ದೂರ ರಾಮೇಶ್ವರಲಿಂಗವು.

೪೯. ಕಂಡೆನೆಂದಡೆ ಮುಂದಕ್ಕೊಂದನರಿವುತ್ತಿದ್ದಿಹಿತ್ತು. ಕಾಣೆನೆಂದಡೆ ಅಂಗದಲ್ಲಿದ್ದ ಕುರುಹಿದ್ದಿಹಿತ್ತು. ಈ ಉಭಯವ ಹಿಂಗಿ ಕಂಡೆಹೆನೆಂದಡೆ ಐಘಟ ದೂರ ರಾಮೇಶ್ವರಲಿಂಗವು ಸಾಧ್ಯವು.

೫೦. ಮೇಘ ಒಸರಿ ಧರೆಯಲ್ಲಿ ನಿಂದು ಆ ಧರೆಯ ತೋಡಿ ತೆಗೆಯೆ ಅವ ಸಲಹಿ ಮುನ್ನಿನ ಹಾಗೆ ಧರೆಗಿಳಿಯೆ ಹಾಗಿರಬೇಕು, ಇಷ್ಟಪ್ರಾಣಯೋಗ ಸಂಬಂಧ ಐಘಟ ದೂರ ರಾಮೇಶ್ವರಲಿಂಗವನರಿವುದಕ್ಕೆ

೫೧. ಇಷ್ಟದ ಪೂಜೆಯನರಿವುದಕ್ಕೆ ಕೋಲ ಸುತ್ತಿದ ನೂಲಿನಂತಿರಬೇಕು. ಭಾವದ ಭ್ರಮೆ ಹಿಂಗುದಕ್ಕೆ ಸಾವಧಾನದಲ್ಲಿ ಸಾವಯುವಾದ ಸಾವಿನಂತೆ ಭಾವಯ್ಯೆದಬೇಕು. ಇಷ್ಟಪ್ರಾಣದಲ್ಲಿ ಉರಿ ಅರಗಿನ ಯೋಗದಂತೆ ಕ್ರಿಯಲ್ಲಿ ಕರಗಬೇಕು. ಇದೇ ದೃಷ್ಟ ಐಘಟ ದೂರ ರಾಮೇಶ್ವರಲಿಂಗವನರಿವುದಕ್ಕೆ.

೫೨. ಇಷ್ಟಪ್ರಾಣಯೋಗ ಸಂಬಂಧ ಯೋಗ ಭೇದದ ಪರಿಯಾವುದೆಂದಡೆ, ಅಕ್ಷಿಯ ಮುಚ್ಚಿದಲ್ಲಿ ನಿರೂಪವಾಯಿತ್ತು. ತೆರೆದಲ್ಲಿ ರೂಪಾಯಿತ್ತು. ತನ್ನಯ ಅರಿವು ಮರವೆಯಿಂದ ಕ್ರಿ ನಿಃಕ್ರಿ ಎಂಬ ಸಂದೇಹವಾಯಿತ್ತು. ನಿಂದ ನೀರ ನೆಳಲು ಚರಿಸಿದಲ್ಲಿ ಅಡಗಿತ್ತು. ಆತೆರದ ದೃಷ್ಟವನರಿ ಐಘಟ ದೂರ ರಾಮೇಶ್ವರಲಿಂಗವು ಏಕ ಸ್ವರೂಪ.

೫೩. ಪಂಚೇಂದ್ರಿಯಂಗಳಲ್ಲಿ ಲಿಂಗಮುಖವಾಗಿ ಕೊಳ್ಳಬೇಕೆಂಬರು. ಆ ಇಂದ್ರಿಯಂಗಳು ಲಿಂಗಕ್ಕೆ ಹೊರತೆಯೇ? ಲಿಂಗದ ಮುಖದಲ್ಲಿ ಇಂದ್ರಿಯಂಗಳು ಬಂದು ನಿಂದು ತಮ್ಮ ಸಂದೇಹವ ಬಿಡಿಸಿಕೊಂಬುವಲ್ಲದೆ ಇಂದ್ರಿಯಂಗಳ ಮುಖಕ್ಕೆ ಲಿಂಗವಿಲ್ಲ. ಲಿಂಗಮುಖದಲ್ಲಿ ಇಂದ್ರಿಯಂಗಳ ನಿವೃತ್ತಿ ಐಘಟ ದೂರ ರಾಮೇಶ್ವರಲಿಂಗದಲ್ಲಿ

೫೪. ಕ್ರಿಯಾಸಂಪದನಾದಲ್ಲಿ ಉರಿ ಕಾಷ್ಠವ ವೇಧಿಸಿದಂತಿರಬೇಕು. ಆಚಾರಪರವೊಡಗೂಡಿದಂತಿರಬೇಕು. ಜಲ ಜಲವ ಕೂಡಿದಂತೆ ಹೆತೆ ಹಿಂಗುದಕ್ಕೊಡಲಿಲ್ಲ. ವಾರಿಯ ಸಿಲೆ ಬಲಿದು ನೋಡ ನೋಡ ನೀರಾದಂತಿರಬೇಕು. ಇಷ್ಟಲಿಂಗ ಸಂಬಂಧದ ನಿಷ್ಠೆ, ಪ್ರಾಣ ಕೂಟ, ಉಭಯ ಮೋಸವಿಲ್ಲದಿರಬೇಕು ಐಘಟ ದೂರ ರಾಮೇಶ್ವರಲಿಂಗವನರಿವುದಕ್ಕೆ.

೫೫. ಸ್ಥೂಲದಿಂದ ಕಾಂಬುದು. ಸೂಕ್ಷ್ಮದಿಂದ ಅರಿವುದು. ಕಾರಣದಲ್ಲಿ ಮಾಡುವುದು. ತ್ರಿವಿಧಭೇದವ ನಿಃಕರಿಸಿ ತ್ರಿವಿಧದ ಭೇದದಿಂದ ಕಾಣು. ತ್ರಿವಿಧದ ಭೇದವ ಕೂಡಿ ಮರೆ. ಐಘಟ ದೂರ ರಾಮೇಶ್ವರಲಿಂಗವ ಏನೂ ಎನ್ನದಿರು.

೫೬. ಊರ್ಧ್ವ ಮುಖದಲ್ಲಿ ಐದಿದ ವಿಹಂಗ ಅಧೋಮುಖದಲ್ಲಿದ್ದ ಧರೆಯ ನೋಡಿ ತಾನಡರುವ ತೆರನ ಕಾಂಬಂತೆ ತುರೀಯದಲಿ ಐದಿ ತಿತದಲ್ಲಿ ನೋಡಿ ತತ್ವದಲ್ಲಿ ನಿಶ್ಚಯವ ಮಾಡಬೇಕು ಇಷ್ಟಲಿಂಗದಲ್ಲಿ. ಆ ಇಷ್ಟ ನಿಶ್ಚಯದ ನಿಜತತ್ವದಲ್ಲಿ ಆಶ್ರಯಿಸಿ ಬಚ್ಚಬಯಲಾಗಬೇಕು ಐಘಟ ದೂರ ರಾಮೇಶ್ವರಲಿಂಗವನರಿವುದಕ್ಕೆ.

೫೭. ಅಂಗ ಲಿಂಗ ಸಂಬಂಧದಿರವು ಬೀಜವೊಡೆದು ಮೊಳೆದೋರುವಂತೆ, ಕುಸುಮ ಬಲಿದು ದೆಸೆಗೆ ವಾಸನೆ ಪಸರಿಸುವಂತೆ, ಭೂಜಲ ಉಣ್ಮಿ ಪರಿವಂತೆ. ಘನಲಿಂಗ ಘಟಕುರುಹಿನಲ್ಲಿ ನಿಜದೋರುತ್ತಿದೆ. ಐಘಟ ದೂರ ರಾಮೇಶ್ವರಲಿಂಗಮೂರ್ತಿ ಅಮೂರ್ತಿ ಆಗುತ್ತಿದೆ.

೫೮. ಇಷ್ಟಲಿಂಗ ಸಂಬಂಧ ಮುಕ್ತಿಪದ. ಭಾವಲಿಂಗ ಸಂಬಂಧ ಭವಕ್ಕೆ ಬೀಜ. ಪ್ರಾಣಲಿಂಗ ಸಂಬಂಧ ಪ್ರಣಮದ ಗೊತ್ತು. ಇಂತೀ ತ್ರಿವಿಧ ಭೇದವರತು ನಿಂದುದು ಐಕ್ಯಲಿಂಗ ಸಂಬಂಧ, ಐಘಟ ದೂರ ರಾಮೇಶ್ವರಲಿಂಗದಲ್ಲಿ.

೫೯. ಮಣ್ಣಿನಲ್ಲಿ ನೀರ ಬೆರಿಸಿ ಮಥಿಸಲಾಗಿ ನಿಂದು ನಿಲಿಸಿ ತೋರಿ ಮುನ್ನಿನಂತಾಯಿತ್ತು. ಅಪ್ಪು ಸಂಗ ಸಂಗವನೆಯ್ದಿದಂತೆ ಇರಬೇಕು ಇಷ್ಟಪ್ರಾಣಯೋಗ ಸಂಬಂಧ ಐಘಟ ದೂರ ರಾಮೇಶ್ವರಲಿಂಗವನರಿವುದಕ್ಕೆ.

೬೦ ಬೀಜ ಕೊಳೆತಾಗ ಅಂಕುರ ನಷ್ಟವಾಯಿತ್ತು. ಸಸಿಯಿಲ್ಲದೆ ಫಲವುಂಟೇ ಅಯ್ಯ? ಇಷ್ಟದ ಅರ್ಚನೆ ಅರತು ಚಿತ್ತ ದೃಷ್ಟವ ಕಾಬು

ದಕ್ಕೆ ಗೊತ್ತಾವುದು ಹೇಳಯ್ಯ? ಅದು ಮುಟ್ಟಿದ ಮುಟ್ಟಿನಲ್ಲಿ ಒದಗು ಐಘಟ ದೂರ ರಾಮೇಶ್ವರಲಿಂಗವನರಿವುದಕ್ಕೆ.

೬೧. ಅಪ್ಪುವಿಲ್ಲದ ಏರಿ, ಚಿತ್ತವಿಲ್ಲದ ಘಟ, ನಿಜತತ್ವವನರಿಯದ ಪೂಜೆ ವ್ಯರ್ಥವಾಯಿತ್ತು ಅವನಿರವು ಐಘಟ ದೂರ ರಾಮೇಶ್ವರಲಿಂಗವನರಿಯದೆ.

೬೨. ಮೆಟ್ಟಿದ ಅಡಿಯು ದೃಢವಾಗಿ ಮೆಟ್ಟಿ ಆಚೆಯಲ್ಲಿ ಕಿತ್ತು ಅಡಿಯಿಡಬೇಕು. ಮುಂದಕ್ಕೆ ಪೊದಗು ಹಿಂದಕ್ಕೆ ದೂರವಾಯಿತ್ತು. ಇಷ್ಟವಲ್ಲಿ ಚಿತ್ತ ನೆಮ್ಮಿ ಮತ್ತೆ ಪ್ರಾಣನ ಪಥ್ಯವನರಿಯಬೇಕು. ಫಲನ ತೊಡಪು ಕೈಗೆ ತಾಹಂತೆ ಘಟ ಜ್ಞಾನಕ್ಕೆ ಭಿನ್ನವಿಲ್ಲ ಐಘಟ ದೂರ ರಾಮೇಶ್ವರಲಿಂಗವನರಿವುದಕ್ಕೆ.

೬೩. ಇಚ್ಛಾಶಕ್ತಿ ಸ್ವರೂಪ ವರ್ತುಳವಾಗಿ ಕ್ರಿಯಾಶಕ್ತಿ ಸ್ವರೂಪ ಗೋಮುಖವಾಗಿ ಜ್ಞಾನಶಕ್ತಿ ಸ್ವರೂಪ ಶಲಾಕೆ ರೂಪಾಗಿ ತ್ರಿವಿಧ ಭೇದ ಒಡಗೂಡಿ ತ್ರಿವಿಧಶಕ್ತಿ ಲಿಂಗವಾಯಿತ್ತು. ಇಚ್ಛಾಶಕ್ತಿಗೆ ಕ್ರಿ, ಕ್ರಿಯಾ ಶಕ್ತಿಗೆ ಜ್ಞಾನ, ಜ್ಞಾನಶಕ್ತಿಗೆ ಸರ್ವ ಭಾವ, ಕೂಟ ಭಾವ, ಇಪ್ಪದಲ್ಲಿ ನಿಂದು, ತ್ರಿವಿಧದ ತೊಟ್ಟು ಬಿಟ್ಟು ಐಘಟ ದೂರ ರಾಮೇಶ್ವರಲಿಂಗವನರಿವುದಕ್ಕೆ ಇದೇ ಗೊತ್ತು.

೬೪. ಕುರುಹೇ ಘಟವಾಗಿ ಅರಿವೇ ಆತ್ಮನಾಗಿ, ಉಭಯುವನರಿವುದು. ಆಚಾರದಂಗವಾಗಿ ಇವು ನಿಂದು ಅಳಿಯೆ ಐಘಟ ದೂರ ರಾಮೇಶ್ವರಲಿಂಗದ ಇರವು ಬಚ್ಚಬಯಲಾಯಿತ್ತು.

೬೫. ನೀರೊಳಗಣ ಕಿಚ್ಚಿಗೆ ನೀರೇ ತಾಯಿ. ಕಲ್ಲೊಳಗಣ ಕಿಚ್ಚಿಗೆ ಕಲ್ಲೇ ತಾಯಿ. ಮರದೊಳಗಣ ಕಿಚ್ಚಿಗೆ ಮರವೇ ತಾಯಿ. ಅವು ಹೊರ ಹೊಮ್ಮಿದಾಗ ತಾಯ ತಿಂದು ತಾವು ತಲೆದೋರುವಂತೆ ಕುರುಹಿಂದ ಅರಿವನರಿತು ಅರಿವು ಕುರುಹ ನಷ್ಟವ ಮಾಡಿ ನಿಂದಲ್ಲಿಯೇ ಐಘಟ ದೂರ ರಾಮೇಶ್ವರಲಿಂಗವು ಅಂಗವರತು ನಿಂದ ನಿಲವು.

೬೬. ಮೊದಲು ರೂಪಾದ ಬಿತ್ತು ಭೂಮಿಯಲ್ಲಿ ಬಿತ್ತಿ ಅಳಿದು ಬೀಜ ನಾಮ ನಿಂದು ಸಸಿಯೆಂಬ ನಾಮವಾಯಿತ್ತು. ಸಸಿ ಬಲಿದು ಬೆಳೆದು ಉಂಡಿಗೆಯ ಬೀಜವೆಂಬ ಉಭಯ ನಾಮವ ತಾಳಿದುದು. ಬೀಜ ಒಂದೋ ಎರಡೋ ಎಂಬುದನರಿದಲ್ಲಿ ಕ್ರಿಶೂನ್ಯವೆಂಬ ಉಭಯ



ನಾಮವಡಗಿತ್ತು. ಐಘಟ ದೂರ ರಾಮೇಶ್ವರಲಿಂಗವು ಉಭಯ ನಾಮ ನಿಂದಿತ್ತು.

೬೭. ಚಿನ್ನ ವಿಶೇಷ, ಮಣ್ಣು ಅಧಮವೆಂದಡೆ ಅದು ನಿಂದು ಕರಗೂವಕ್ಕೆ ಮಣ್ಣಿನ ಕೋವೆಯೇ ಮನೆಯಾಯಿತ್ತು. ಮಿಥ್ಯವನರಿದು ವಸ್ತುವ ನೆಮ್ಮಿದಕ್ಕೆ ಇದೇ ದೃಷ್ಟ, ಐಘಟ ದೂರ ರಾಮೇಶ್ವರಲಿಂಗವನರಿವುದಕ್ಕೆ.

೬೮. ಕ್ರಿಯೆಯ ತೆರನ ಅರಿಯೆನೆಂದು ಬಿಡಬಹುದೇ ಆಚಾರವ? ಆಚಾರದ ತೆರನ ಅರಿಯೆನೆಂದು ಮರೆಯಬಹುದೇ ಮಾರ್ಗವ? ಇಂತೀ ನಾನಾ ಭೇದಂಗಳಲ್ಲಿ ಅರಿದು ವಿಚಾರಿಸಿ ಮಣ್ಣಿನಲ್ಲಿ ಕೆಡಿಸಿ ಮಣ್ಣಿನಲ್ಲಿ ಅರಸುವಂತೆ, ಮನೆಯಲ್ಲಿರಿಸಿದ ಒಡವೆಯ ಮರೆದು ನೆನೆವಂತೆ ಅರಿ. ಇಷ್ಟಲಿಂಗ ಪ್ರಾಣಲಿಂಗದ ಗೊತ್ತೆಂಬುಭಯ ಬೇಡ. ಅದು ನಿಶ್ಚಿಂತು ವೊಂದಲ್ಲದೆ ಬೇರೆ ನಾಮವಿಲ್ಲ ಐಘಟ ದೂರ ರಾಮೇಶ್ವರಲಿಂಗಕ್ಕೆ.

೬೯. ಸ್ವಪ್ನದಲ್ಲಿ ಮರೆದು ಸಕಲವ ಕಂಡು ಅರಿದು ಹೇಳೂದು ಆತ್ಮ ಭಿನ್ನವೋ ಘಟ ಭಿನ್ನವೋ? ಇಷ್ಟಲಿಂಗವೆಂದು ಪ್ರಾಣಲಿಂಗವೆಂದು ಕಟ್ಟಿ ಹೋರುವಾಗ ತಾನು ಧೃಷ್ಟದ ಅಂಗವ ಹೊತ್ತು ಹೋರುತ್ತಿದ್ದುದು ಮತ್ತೆ ಕ್ರಿಯಲ್ಲಾಯೆಂಬುದಕ್ಕೆ ತೆರಪಾವುದು? ಅಲ್ಲ ಅಹುದೆಂದು ಗೆಲ್ಲ ಸೋಲಕ್ಕೆ ಹೋರುವುದು ಕ್ರಿಯೋ ನಿಃಕ್ರಿಯೋ? ಮಂದಿಯ ನಡುವೆ ನಿಂದಿರ್ದ ಉಡುವಿನಂತೆ ಕಣ್ಣು ಮುಚ್ಚಿ ಗೆದ್ದೆನೆಂದು ಬಡಿಯಿಸಿಕೊಂಬ ತೆರದ ಮಾತಿನ ಮಾಲೆ ಬೇಡ. ನೂಲ ಹಿಡಿದು ಬೆಟ್ಟವನೇರುವಂತೆ, ಅಥವೆ ಬಾಲನ ಹಿಡಿದು ಬದುಕುವಂತೆ, ಕೂಷ್ಮಾಂಡವ ಹಿಡಿದು ಐದುವ ಜಲದಲ್ಲಿ ಚರಿಸುವನಂತೆ, ನೆರೆನಂಬು. ಮಾಡುವ ಕ್ರಿಯಲ್ಲಿ ಅರಿವು ಹೀನವಾಗಬೇಡ. ಬಿಡದಿರು ಮಾಡುವ ಸತ್ಕ್ರಿಯೆ. ಇವನರಿದು ಒಡಗೂಡು ಐಘಟ ದೂರ ರಾಮೇಶ್ವರಲಿಂಗದ ಉಭಯ ಭಾವವಳಿದು.

೭೦. ಒಂದ ಬಿಟ್ಟೊಂದ ಹಿಡಿದಿಹೆನೆಂದಲ್ಲಿ ಸಿಕ್ಕಿತ್ತು ಅರಿವು. ತಮಂಧವೆಂಬ ಮಂದಿರದಲ್ಲಿ ಹಿಡಿದುದ ಬಿಟ್ಟು ವಾರಿಯಲ್ಲಿ ಹೊಳಹು ದೋರಿದ ಮಚ್ಚಕ್ಕೆ ಹೋಹ ಶಿವ ಬುದ್ಧಿಯಂತಾಗಬೇಡ. ಹಿಡಿದಲ್ಲಿ ಕಂಡು ಕಂಡಲ್ಲಿ ನಿಂದು ನಿಂದಲ್ಲಿ ಕೂಡಿ ಕೂಡಿದಲ್ಲಿಯೇ ಉಭಯ ಬಯಲಾಯಿತ್ತು ಐಘಟ ದೂರ ರಾಮೇಶ್ವರಲಿಂಗವು ತಾನು ತಾನೇ.

೭೧. ಅಂಗದಲ್ಲಿ ಕಟ್ಟಿದ ವಸ್ತ್ರವ ಬಿಟ್ಟು ನೋಡಲಾಗಿ ಲಿಂಗದ ಕುರುಹು ಇಲ್ಲದಿರೆ ಇದೇನು ಅಂಗನಾಸ್ತಿಯಾದೆ? ಐಘಟ ಬಿಟ್ಟು ಓಘಟ ನಾಸ್ತಿಯಾದೆ ಎಂಬುದಕ್ಕೆ ಮೊದಲೇ ಅಂಗ ಬಯಲಾಯಿತ್ತು ರಾಮೇಶ್ವರಲಿಂಗದಲ್ಲಿ.

೭೨. ಅಂಗದಲ್ಲಿದ್ದು ಕೈಗೆ ಬಂದೆ. ಕೈಯ್ಯಿಂದ ಮನಕ್ಕೆ ಬಾರೆಯಯ್ಯ! ನಾ ಹಾಡೆ ನೀ ಕೇಳಿ ಬಾಯಿ ಕಿವಿ ನೋವಿಲ್ಲವೇ ಅಯ್ಯ? ನೀ ಸಾವ ದಿನವಿಲ್ಲ. ನಾನಳುವ ದಿನವಿಲ್ಲ. ನಿನ್ನಂಗವಡಗದು. ಎನ್ನ ಮನ ಉಡುಗದು. ಕ್ರಿಯೆಂಬ ಹಾವಸೆಯಲ್ಲಿ ಸಿಕ್ಕಿ ಮೇಲನರಿಯದೆ ತೊಳಲುತ್ತೈದೇನೆ. ಐಘಟಕೆ ಸಾವ ಹೇಳಾ ಐಘಟ ದೂರ ರಾಮೇಶ್ವರಲಿಂಗವೇ.

---

## ಗುರು ಲಿಂಗ ಜಂಗಮ.

೭೩. ಬೀಜ ಗುರುವಾಗಿ, ಅಂಕುರ ಲಿಂಗವಾಗಿ, ಅದರ ಫಲರಸ ಕಳೆ ಜಂಗಮವಾಗಿ, ಮೂರನುಳಿಯೆ ನಿಂದುದು ನಿಜತತ್ವವಾಗಿ, ವಿರಕ್ತ ಭಾವದಲ್ಲಿ ನಿಂದುದು ಜ್ಞಾನ ಜಂಗಮ. ಆ ಭಾವ ಐಘಟ ದೂರ ರಾಮೇಶ್ವರಲಿಂಗವು ತಾನೆ.

೭೪. ಕಾಲವಿರಹಿತ ಗುರುವಾಗಬೇಕು. ಕರ್ಮವಿರಹಿತ ಲಿಂಗವಾಗಬೇಕು. ಭವವಿರಹಿತ ಜಂಗಮವಾಗಬೇಕು. ಈ ಮೂರನರಿತು ಭೇದಿಸಿ ವಿರಕ್ತನಾಗಬೇಕು, ಐಘಟ ದೂರ ರಾಮೇಶ್ವರಲಿಂಗವನರಿವುದಕ್ಕೆ.

---

## ತಾಮಸಜಂಗಮರ ರೀತಿ.

೭೫. ಅಶನದಾಸೆಗಾಗಿ ಆಚಾರವ ತಪ್ಪಿ ವಿಷಯದಾಸೆಗಾಗಿ ವಿರಕ್ತಿಯ ಬಿಟ್ಟು ಸಕಲರ ಕೂಟದಲ್ಲಿ ವಿಕಳತೆಗೊಂಬ ಪ್ರಕೃತಿ ಭಾವಿಗುಂಟೇ ನಿಜ ಭಕ್ತಿ ಐಘಟ ದೂರ ರಾಮೇಶ್ವರಲಿಂಗವನರಿವುದಕ್ಕೆ?

೭೬. ರಾಜರ ಬಾಗಿಲಲ್ಲಿ ನಿಂದು ಕೂಗಿ ಮೊರೆಯಿಟ್ಟು, ನೀನಾರೋ ಎಂದು ಕೇಳಿ ಕರೆದೊಡೆ, ನಾನೊಡೆಯರು ಎಂದೊಡೆ ಅಡಗದೇಕೆ ನಿನ್ನ ಬಾಯಿ? ತಡೆಯಿಸಿಕೊಂಡು ಒಡೆಯತನವುಂಟೇ ನಿನಗಲ್ಲಿ? ಇಂತೀ ಬಿಡು



ಹೋರಿಗಳ ಬುಡ ಅಡಗದೇಕೆ, ಐಘಟ ದೂರ ರಾಮೇಶ್ವರಲಿಂಗವನರಿಯದೆ?

೭೭. ನರದೇಹವ ತೊಟ್ಟು ತಾ ಗುರುವೆಂದು ಇದಿರಿಗೆ ಇಷ್ಟವ ಕೊಟ್ಟು ಅವರ ಮನೆಯಲ್ಲಿ ಒಲ್ಲದೆ ಅಕ್ಕಿ ತುಪ್ಪವನೀಸಿಕೊಂಡು ಆಟುಗೊಂಡು ಉಂಬ ವಿಟ್ಟಿಯ ಭಂಡರ ಕೆಯ್ಯಲ್ಲಿ ಕಟ್ಟಿಸಿಕೊಂಡ ಲಿಂಗ ದೃಷ್ಟದಿ ಶ್ರವಕಾಯ. ಇದನರಿತು ಅಲ್ಲಿ ಹೊಕ್ಕು ಉಂಡವಂಗೆ ಕರಟನ ಕೆಯ್ಯಕೀಟಕ ಆ ಕೂಳು ಘಟಿತಮಯ ಐಘಟ ದೂರ ರಾಮೇಶ್ವರಲಿಂಗವು ಅವರ ಒಲ್ಲನಾಗಿ.

೭೮. ಗುರುವಿಗೆ ಲಿಂಗ ಸಾಕ್ಷಿ. ಲಿಂಗಕ್ಕೆ ಜಂಗಮ ಸಾಕ್ಷಿ. ಆ ಜಂಗಮಕ್ಕೆ ಅರಿವು ಸಾಕ್ಷಿ. ಇಂತೀ ಅರಿವ ಮರೆದು ನರಗುರಿಗಳ ಬಾಗಿಲಲ್ಲಿ ನಿಂದು ತಡೆಯಿಸಿಕೊಂಬ ಅರಿಗುರಿಗೇಕೆ ಅರಿವಿನ ಮಾತು? ಐಘಟ ದೂರ ರಾಮೇಶ್ವರಲಿಂಗಕ್ಕೆ ಅವರ ಇರವು ಹೊರಗಾಗಿಹುದು.

೭೯. ಬೋಧೆಯ ಹೇಳಿ ಉಂಬವಂಗೆ ಆಗುಚಾಗೆಯ ಮಾತೇಕೆ? ಅವ ಮಾತ ಕಲಿತ ಮಾಗತನಂತೆ, ಆಟವ ಕಲಿತ ಕೋಲಾಟಿಕನಂತೆ ಚಿಃ ಅದೇತರ ಅರಿವು? ಐಘಟ ದೂರ ರಾಮೇಶ್ವರಲಿಂಗಕ್ಕೆ ಮುನ್ನವೇದೂರ.

೮೦. ಇರುಳಿಗೆ ಮೊಲೆ ಯೋನಿ ಅಧರ, ಹಗಲಿಗೆ ಸಂಪುಟ ಲೇಖ ಮಾತಿನ ಮಾಲೆಯ ಸರಕು. ವೇಷದ ಪುಣ್ಯವ ಸುಡು. ಭ್ರಾಂತರ ಮಾತು ಸಾಕು ನಿಲ್ಲು, ಐಘಟ ದೂರ ರಾಮೇಶ್ವರಲಿಂಗವು ಅವರ ಒಲ್ಲನಾಗಿ.

೮೧. ಹೆರುವ ಹೆಂಗೂಸು ಕೂಸು ಸಿಕ್ಕಿ ತನ್ನ ಉಡಿಯ ತೋರುವಂತೆ ಅದು ಕೂಸಿನ ಆಸೆಯೋ, ತನ್ನ ಅಪಮಾನದಾಸೆಯೋ, ತನ್ನ ಅಸುವಿನ ಆಸೆಯೋ? ಮಾತ ಕಲಿತು ವೇಷವ ತೋರಿ ಘಾತಕತನದಲ್ಲಿ ಉಂಬ ಪಾಶಧಾರಿಗಳಿಗೇಕೆ ನಿರ್ಜಾತನ ಮಾತು? ಅದು ನೀತಿಯಲ್ಲ ಐಘಟ ದೂರ ರಾಮೇಶ್ವರಲಿಂಗವು ಅವರ ಒಲ್ಲನಾಗಿ.

೮೨. ಕಾಣಬೇಕೆಂದು ಮುಂದೆ ನಿಂದು ಕೇಳಬೇಕೆಂದು ಕೂಗಿ ಕರೆದು ಈ ಕೇಣಸರದ ಜಾಣತನದ ಗುರುವೇಕೆ? ಸುಡುವೊಡಲ ಬಿಡು. ಅಸುವ ನಿನಗೆ ಒಡೆಯತನವೇಕೆ? ಸುಖದಡಗಿಂಗೆ ಸಿಕ್ಕಿ ಹಿಡಿ ಮೊಲಕ್ಕೆ ಗಿಡುವಿನ ಹಂಗಿಲ್ಲ. ಬಿಡುವನವರ ಐಘಟ ದೂರ ರಾಮೇಶ್ವರಲಿಂಗವು.

೪೩. ವಾಹನವ ಕೀಳಾಗಿ ತಿರುಗುವ ಚೂಣಿಯಲ್ಲಿ ಹೋಹ ವೇಳೆಯು ಕಾವ ಕಳುಗುಡುಹಿಗೇಕೆ ಭಾಳೇಕ್ಷಣನ ಭಾವ? ಕೀಳು ಜೀವ ವೇಕೆ ಅಡಗದು? ಮತ್ತೆ ನಾನೆಂಬುದೇಕೆ ಅಡಗದು ಐಘಟ ದೂರ ರಾಮೇಶ್ವರಲಿಂಗವನರಿಯದೆ ?

೪೪. ವ್ರತಭ್ರಷ್ಟನ ಗುರು ಘಾತಕನ ವಂದಿಸಿ ಸಿಂದಿಸುವನ ದ್ರವ್ಯದಾಸೆಗೆ ಅವನ ಮಂದಿರವ ಹೊಕ್ಕಂಡಡೆ ಜಂಬುಕ ತಿಂದ ಹಡುವ ಪಿಕ್ಕ ಹುಳಿತವ ತಾ ತಿಂದಂತೆ ಐಘಟ ದೂರ ರಾಮೇಶ್ವರಲಿಂಗ.

೪೫. ಮಣ್ಣು ಬೆಂದು ಮಡಕೆಯಾಗಿ ಒಡೆದೊಡೆ ಮುನ್ನಿನಂತಾ ಪುದಿಲ್ಲ. ಮಿಸುನಿ ವಿಶ್ವದೊಳಗಿದ್ದು ತನ್ನಯ ರಸ ಕುಲವ ಬೆರಸಿದು ದಿಲ್ಲ. ಕ್ಷೀರ ಬಲಿದು ನಿಂದು ಮುನ್ನಿನ ಪಿಸಿತವ ಸಾರಿದುದಿಲ್ಲ. ಮೂರ ನರಿದು ಹರಿದು ಮೂರನೊಡಗೂಡುವ ಡಾಗಿನ ಪಶುಗಳಿಗೇಕೆ ನೆರೆ ನೀರನ ಹೊಲಬು ಐಘಟ ದೂರ ರಾಮೇಶ್ವರಲಿಂಗವನರಿಯದಾಗಿ?

೪೬. ತಡೆವನ ಬಾಗಿಲಲ್ಲಿ ನಿಂದು ಕರೆಯಿಸಿಕೊಂಡು ಹೋದೆಹೆ ನೆಂಬ ಒಡೆಯತನವೇಕೆ ? ಇವೆಲ್ಲವನರಿದು ಬಿಟ್ಟು ತಿರಿಗಲ್ಲಿಗೆ ಬಹ ಸ್ಥಾಣುವಿನ ಮರೆಯ ಖುಲ್ಲನ ಹಸುವಿನಂತಾಯಿತ್ತು ನಿಮ್ಮರಿಪು ಐಘಟ ದೂರ ರಾಮೇಶ್ವರಲಿಂಗವನರಿಯದೆ.

---

## ನಿರ್ಲೇಪತ್ವ.

೪೭. ಹುಡಿಹತ್ತದ ಗಾಳಿಯಂತೆ ವಾಚ ಹತ್ತದ ಸರ್ವಸಾರ ಸಂಬಂಧಿಯಂತೆ ಭಸ್ಮದಲ್ಲಿದ್ದ ಸುಘಟಿಯ ಬೀಜದಂತೆ ಘೃತ ಕಿಸಲ ಯದಂತೆ ಏತರಲ್ಲಿಯೂ ಬಂಧವಿಲ್ಲದೆ ಕಪಿತ್ಥ ವೃಕ್ಷದಲ್ಲಿದ್ದ ಮಧು ಪಾನದಂತಿರಬೇಕು ಐಘಟ ದೂರ ರಾಮೇಶ್ವರಲಿಂಗವನರಿವುದಕ್ಕೆ.

೪೮. ಭಕ್ತನಾದಲ್ಲಿ ಪಂಕವ ಹೊದ್ದದ ವಾರಿಯಂತಿರಬೇಕು. ಜಲವ ಮುಟ್ಟದ ತೈಲದಂತಿರಬೇಕು. ರಸಬದ್ಧಯೋಗದಂತಿರಬೇಕು. ಮರಾಳನ ಮಾಟದಂತೆ ಸಂಸಾರದ ಒದಗನರಿತು ಅರಿಯದಂತಿರಬೇಕು ಐಘಟ ದೂರ ರಾಮೇಶ್ವರಲಿಂಗದಲ್ಲಿ.

೪೯. ಅರಿದವನಿರವು ಕಮಠನ ಅಂಗದಂತೆ ಲಂಪಟನುಲುಹಿನ ಬೆಂಬಳಿಯ ಅಂಗವಾಸಿಯಂತಿರಬೇಕು. ಅದು ಲಿಂಗಾಂಗಿಯ ಬೆಡಗು. ಐಘಟ ದೂರ ರಾಮೇಶ್ವರಲಿಂಗವನರಿವುದಕ್ಕೆ ಅದೇ ಸದ್ಭಾವದ ಗೊತ್ತು.



೫೦. ಕ್ರಿ ಭಾವ ಶುದ್ಧತೆ ಆದವನಿರವು ಬೆಂಕಿ ಕಾಷ್ಠವ ಕೂಡಿ ದ್ವಂದ್ವವಾಗಿ ಉರಿದು ಹಿಂಗಿ ನಂದಿದಂತಿರಬೇಕು. ಹುಳಿ ಸಿಹಿಯ ಕೂಡಿ ಕೂಟಸ್ಥದಿಂದ ಉಳುಮೆಯ ಘೃತದಂತಿರಬೇಕು. ವಿಷ ಶರೀರ ದಲ್ಲಿ ವೇಧಿಸಿ ದೆಸೆಯನಳಿದಂತಿರಬೇಕು. ಅಗ್ನಿಯಲ್ಲಿ ಅರತ ಉದ ಕದಂತೆ ಬಯಲೊಳಗಡಗಿದ ಶಬ್ದದಂತೆ ಇರು ಐಘಟ ದೂರ ರಾಮೇ ಶ್ವರಲಿಂಗವನರಿವುದಕ್ಕೆ.

೫೧. ಕಾಳಿಕೆ ಹರಿದ ಹಿಮದಂತೆ ನಾಳಿಕೇರ ಫಲವ ನುಂಗಿದ ವಾರಣದಂತೆ ಬೆರಸಿ ಬೆರಸದಂತಿರಬೇಕು. ಅದು ನಾಲಗೆಯ ಹುಣ್ಣಿನಂತೆ ಮೀರಬಾರದು ಅಂಗೀಕರಿಸಬಾರದು. ಕ್ರಿಜ್ಞಾನ ಸಂಪದದಲ್ಲಿ ಕಾಬ ವಂಗೆ ಭಾವ ಶುದ್ಧವಾಗಿರಬೇಕು ಐಘಟ ದೂರ ರಾಮೇಶ್ವರಲಿಂಗ ವನರಿವುದಕ್ಕೆ.

೫೨. ಮರುತ ಸಂಗವ ಮಾಡಿದ ಉರಿ ವಾರಿಗಂಧದಂತೆ ವಾಳುಕ ಸಂಬಂಧಿಯಾದ ಜಲದ ಇರವಿನಂತೆ ಶಿಲೆ ತೈಲದ ಒಲುಮೆಯಂತಿರ ಬೇಕು ಐಘಟ ದೂರ ರಾಮೇಶ್ವರಲಿಂಗವನರಿವುದಕ್ಕೆ.

೫೩. ಅದ್ರಿಯಲ್ಲಿ ಕರೆಯೆ ಆ ಶಬ್ದ ತನ್ನ ಒಡಗೂಡಿ ಕರೆ ವಂತೆ ಚಿತ್ತ ನೆನೆದು ತಾ ಹೊತ್ತಿದ್ದ ಘಟವ ಎತ್ತಿಕೊಂಡು ಹೋಹಂತೆ ವಿಹಂಗನ ಅಕ್ಷಿಯಲ್ಲಿ ಮರಳುವ ಸಂಚಾರದ ಒಳುಪಿನಂತೆ ಮಿಂಚಿನ ಸಂಚ ತೋರಿ ಹಿಂಚು ಮುಂಚಿಲ್ಲದಂತಿರಬೇಕು ಐಘಟ ದೂರ ರಾಮೇ ಶ್ವರಲಿಂಗವನರಿವುದಕ್ಕೆ.

---

## ಅರಿವು

೫೪. ಪಟುಕದ ಘಟದಲ್ಲಿ ರಜ ನೀರ ತುಂಬಿದಡೆ ಧವಲ ಸರಿ ಸೂತ್ರ ಉಂಟೇ? ಉದಕ ಹಿಂಗೆ ಆ ಘಟ ಮುನ್ನಿನಂದು. ಅದನಳಿದು ಕಾಣು ಐಘಟ ದೂರ ರಾಮೇಶ್ವರಲಿಂಗವ.

೫೫. ಕುಟಿಲಕ್ಕಲ್ಲದೆ ಜಗ ಸಿಕ್ಕದು. ವಾಚಕಂಗಲ್ಲದೆ ಭೋಗ ವಿಲ್ಲ. ಘಟ ಧರ್ಮಕ್ಕೆ ಹೊರಗಾಗು, ಐಘಟ ದೂರ ರಾಮೇಶ್ವರಲಿಂಗ ವನರಿವುದಕ್ಕೆ

೯೬. ಪೃಥ್ವಿ ಸದ್ಯೋಜಾತನ ಹಂಗು, ಜಲ ವಾಮದೇವನ ಹಂಗು, ಅಗ್ನಿ ಅಘೋರನ ಹಂಗು, ವಾಯು ತತ್ಪುರುಷನ ಹಂಗು, ಆಕಾಶ ಈಶಾನ್ಯದ ಹಂಗು. ಪಂಚ ಬ್ರಹ್ಮವ ಮರೆದು ಓಂಕಾರ ಬ್ರಹ್ಮವನರಿ ಐಘಟ ದೂರ ರಾಮೇಶ್ವರಲಿಂಗವ.

---

## ಸಾಮರಸ್ಯ

೯೭. ಕುರುಹಿಟ್ಟಲ್ಲಿ ಅರಿವು ನಷ್ಟವಾಯಿತ್ತು. ಅರಿವ ನುಂಗಿದ ಕುರುಹು ಇದಿರ ಭಾವಕ್ಕೊಡಲಾಯಿತ್ತು. ತನ್ಮಯ ನಷ್ಟವಾಗಿ ಉಭಯ ದೋರದೆ ನಿಂದಲ್ಲಿ ಆ ನಿಲವು ತಾನೇ ಐಘಟ ದೂರ ರಾಮೇಶ್ವರ ಲಿಂಗವು.

೯೮. ಉಂಟೆಂಬುದು ಭಾವದ ನೆಮ್ಮುಗೆ. ಇಲ್ಲ ಎಂಬುದು ಚಿತ್ತದ ಪ್ರಕೃತಿ. ಉಭಯ ನಾಮ ನಷ್ಟವಾಗಿ ನಿಂದ ಉಳುಮೆ ಐಘಟ ದೂರ ರಾಮೇಶ್ವರಲಿಂಗ ಇಕ್ಕಿದ ಗೊತ್ತು.

೯೯. ಅಪ್ಪುಮಯ ಬಲಿದು ಜಗ ಸಾಕಾರವಾಗಿ ನಿಂದಲ್ಲಿ ಧರೆ ಸಲಿಲ ಅನಲ ಕುರುಹಾಗಿ ನಿಂದಿತ್ತು. ಆಪ್ ನಿಳಯಾಂತವಾಗಿ ವಾಯು ಘಟಿಸಿತ್ತು. ಇಂತೀ ಪಂಚಬ್ರಹ್ಮ ಮೂರ್ತಿ ಐಘಟೇಶ್ವರ ಲಿಂಗವಾಯಿತ್ತು. ಇಂತಿವು ಪ್ರಳಯಕ್ಕೊಳಗೆಂದು ಹೊರಗಾಗಿ ನಿಂದ ಐಘಟ ದೂರ ರಾಮೇಶ್ವರಲಿಂಗವು.

೧೦೦. ಸ್ಥಾಣುವಿನ ರಜ್ಜು ಮೀರಿ ಎಯ್ದ ದೇಸಿ ಆಡಿ ತನ್ನಯ ಸ್ಥಾನಕ್ಕೆ ಬಹಂತೆ ವಸ್ತುವಿನ ಗೊತ್ತಿನಿಂದ ಕಟ್ಟು ಮೀರಲಿಲ್ಲವಾಗಿ ಐಘಟ ದೂರ ರಾಮೇಶ್ವರಲಿಂಗದಲ್ಲಿಂಗೆ ಐದುವ ತೆರ.

೧೦೧. ಸರ್ವವೆಲ್ಲವು ವಸ್ತುವಿನ ಆಧೀನವಾದಲ್ಲಿ ಬೇರೊಂದು ತಟ್ಟುವ ಮುಟ್ಟುವ ಠಾವುಂಟೆ? ಸರ್ವಜ್ಞ ಭಾವಗೆ ಭಿನ್ನ ಭಾವವಿಲ್ಲ ಐಘಟ ದೂರ ರಾಮೇಶ್ವರಲಿಂಗದಲ್ಲಿ.

---

College of Commerce
Library, Bijapur.